ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

EMAIL : dairyadadaari@gmail.com ಸಂಪುಟ: 01 ಸಂಚಿಕೆ: 67

ಬೆಲೆ ರೂ : 2.00

ರಾಯಚೂರು

ಪುಟ: 4

DAIRYADA DAARI

RNI NO: KNKAN/25/A2795 ಮಂಗಳವಾರ: 17–02–2026


## ತಲೆಹರಟೆ, ಅವಿವೇಕದ ಹೇಳಿಕೆ ಪ್ರಿಯಾಂಕ್ ವಿರುದ್ಧ ಬಿವೈವಿ ಕಿಡಿ

**ಬೆಂಗಳೂರು, ಫೆ. 16–** ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ಸಚಿವ ಪ್ರಿಯಾಂಕ ಖರ್ಗೆಯವರ ಹೇಳಿಕೆ ತಲೆಹರಟೆಯ, ಉಡಾಫೆಯ, ಅವಿವೇಕದ ಹೇಳಿಕೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕಿಡಿಕಾರಿದ್ದಾರೆ.

ಬಿಜೆಪಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಘ ಪರಿವಾರದ ಮೇಲಿನ ದ್ವೇಷದ ಪರಿಣಾಮವಾಗಿ ಪ್ರಿಯಾಂಕ ಖರ್ಗೆ ಈ ಹೇಳಿಕೆ ಕೊಟ್ಟಿದ್ದಾರೆ. ಹತಾಶೆ, ಬಾಲಿಶತನದಿಂದ ಹೇಳಿಕೆ ಕೊಟ್ಟಿದ್ದಾರೋ ಗೊತ್ತಿಲ್ಲ. ಇದು ತಲೆಹರಟೆ, ಉಡಾಫೆಯ ಹೇಳಿಕೆ ಎಂದು ವಾಗ್ದಾಳಿ ನಡೆಸಿದರು.

ಸಚಿವ ಪ್ರಿಯಾಂಕ ಖರ್ಗೆ ಜವಾಬ್ದಾರಿ ಸ್ಥಾನದಲ್ಲಿರುವವರು. ಮಾತಿನ ಚಪಲಕ್ಕೆ ಸಂಘ ಪರಿವಾರವನ್ನು ಟೀಕಿಸುವುದು ಸರಿಯಲ್ಲ. ಆರ್‌ಎಸ್‌ಎಸ್‌ನ 100 ವರ್ಷದ ಸಾಧನೆ, ಸಮಾಜ ಕಟ್ಟುವಲ್ಲಿ ಬದ್ಧತೆ, ತ್ಯಾಗ, ದೇಶ ನಿರ್ಮಾಣದಲ್ಲಿ ಆರ್‌ಎಸ್‌ಎಸ್ ಪಾತ್ರವನ್ನು ಪ್ರಿಯಾಂಕ ಖರ್ಗೆ ಅರ್ಥ ಮಾಡಿಕೊಂಡಿಲ್ಲ. ಕಣ್ಣಿದ್ದು ಕುರುಡರಾಗಿ, ಕಿವಿಯಿದ್ದೂ ಕಿವುಡರಾಗಿ ಅವರು ನಟನೆ ಮಾಡುತ್ತಿದ್ದಾರೆ ಎಂದು ದೂರಿದರು.

ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಮುಖ್ಯಮಂತ್ರಿ ಹುದ್ದೆಯ ಕಚ್ಚಾಟವನ್ನು ಡೈವರ್ಟ್ ಮಾಡಲು ಅವರು ಈ ರೀತಿ ಆರ್‌ಎಸ್‌ಎಸ್‌ನ್ನು ಟೀಕೆ ಮಾಡುತ್ತಿದ್ದಾರೆ. ಸಚಿವರಾಗಿ ಅವರು ಇಲಾಖೆಯ ಸಾಧನೆ ಬಗ್ಗೆ ಇದುವರೆಗೂ ಮಾತನಾಡಿಲ್ಲ. ಕಲ್ಬುರ್ಗಿ ಏಕೆ ಹಿಂದುಳಿದಿದೆ ಎಂಬುದನ್ನು ಹೇಳಿಲ್ಲ. 8 ವರ್ಷ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು. ಆದರೂ ಪ್ರಿಯಾಂಕ ಖರ್ಗೆಯವರಿಗೆ ಕಲ್ಬುರ್ಗಿ ಅಭಿವೃದ್ಧಿ ಕಡೆ ಗಮನ ಕೊಡಲು ಆಗಿಲ್ಲ. ಕಲ್ಬುರ್ಗಿ ನಗರದ ಅನೇಕ ವಾರ್ಡ್‌ಗಳಲ್ಲಿ ಈಗಲೂ ಕುಡಿಯುವ ನೀರು ಸಿಗುತ್ತಿಲ್ಲ. ಇದರ ಬಗ್ಗೆ ಗಮನ ಕೊಡದೆ ಉದ್ದುದ್ದ ಭಾಷಣ ಮಾಡುತ್ತಿದ್ದಾರೆ ಎಂದು ವ್ಯಂಗ್ಯವಾಗಿ ಹೇಳಿದರು. ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಸೇವೆ ತಿಳಿಯಲು ನಾಗಪುರಕ್ಕೆ ಬನ್ನಿ, ಅಧ್ಯಯನ ಮಾಡಿ ಎಂದು ಪ್ರಿಯಾಂಕ ಖರ್ಗೆಯವರಿಗೆ ಸವಾಲು ಹಾಕಿದ ಅವರು, ನೀವು ಅಭಿವೃದ್ಧಿ ಕೆಲಸ ಮಾಡಿದ್ದರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಮಾಡುತ್ತಿದ್ರಿ. ಆದರೆ ಚುನಾವಣೆ ಮಾಡಲು ನಿಮಗೆ ಧೈರ್ಯವಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು.ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಗಳಿಲ್ಲ ಎಂಬ ಸುದ್ದಿಗಳು ಮಾಧ್ಯಮಗಳಲ್ಲಿ ರಾರಾಜಿಸುತ್ತಿವೆ. ಆದರೂ ಶಾಸಕರಿಗೆ ವಿದೇಶ ಪ್ರವಾಸದ ಭಾಗ್ಯ ಕಲ್ಪಿಸಲಾಗಿದೆ. ಮೊದಲು ಆಸ್ಪತ್ರೆಗಳಲ್ಲಿ ಔಷಧಿಗಳನ್ನು ಲಭ್ಯ ಇರುವಂತೆ ನೋಡಿಕೊಳ್ಳಿ. ಗ್ರಾಮೀಣ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಔಷಧಿಗಳ ಕೃತಕ ಕೊರತೆ ಸೃಷ್ಟಿಸಿ ಈ ಸರ್ಕಾರದ ಕಳ್ಳ ದಂಧೆ ಮಾಡಲು ಹೊರಟಿದೆಯಾ ಎಂಬ ಅನುಮಾನ ಜನರಿಗೆ ಬಂದಿದೆ ಎಂದರು.ಮುಖ್ಯಮಂತ್ರಿ ಪುತ್ರ ಯತೀಂದ್ರ ಅವರು ಶಿವರಾತ್ರಿ ಕಳೆದ ಮೇಲೆ ಡಿ.ಕೆ. ಶಿವಕುಮಾರ್ ರವರಿಗೂ ಒಳ್ಳೆಯದಾಗುತ್ತದೆ, ನಮಗೂ ಒಳ್ಳೆಯ ದಾಗುತ್ತದೆ ಎಂದಿದ್ದಾರೆ. ಇವರ ಮಾತಿನ ಅರ್ಥ ಕಳೆದ ಎರಡೂ ವರೆ ವರ್ಷದಲ್ಲಿ ರಾಜ್ಯದ ಜನತೆಗೆ ಒಳ್ಳೆಯದಾಗಿಲ್ಲ, ಮುಂದೆ ಒಳ್ಳೆಯದಾಗುತ್ತದೆ ಎಂಬುದನ್ನು ಅವರು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆ ಎಂದರು. ಬಿಜೆಪಿ ಶಾಸಕ ಬೈರತಿ ಬಸವರಾಜು ವಿರುದ್ಧ ಷಡ್ಯಂತ್ರ ನಡೆದಿದೆ. ತನಿಖೆ ಸರಿಯಾಗಿ ನಡೆಸಲಿ. ಈ ಹಿಂದೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ವಿರುದ್ಧವೂ ಷಡ್ಯಂತ್ರ ಮಾಡಿ ಪ್ರಕರಣ ಹಾಕಿದ್ದರು. ಅದರಲ್ಲಿ ಯಡಿಯೂರಪ್ಪನವರಿಗೆ ಕ್ಲೀನ್‌ಚಿಟ್ ಸಿಕ್ಕಿತು. ಬೈರತಿ ಬಸವರಾಜು ಪ್ರಕರಣದಲ್ಲೂ ಸರಿಯಾದ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು. ಮೈತ್ರಿ ಚೆನ್ನಾಗಿದೆ–ಬಿಜೆಪಿ–ಜೆಡಿಎಸ್ ನಡುವಿನ ಮೈತ್ರಿಯಲ್ಲಿ ಯಾವುದೇ ತೊಂದರೆ ಇಲ್ಲ. ಎರಡೂ ಪಕ್ಷಗಳ ಮಧ್ಯೆ ಸಹಕಾರ ಇದೆ. ಯಾರೋ ಒಬ್ಬಿಬ್ಬರು ಸಹಕಾರ ಇಲ್ಲ ಎಂದು ಮಾತನಾಡುತ್ತಾರೆ. ಅದಕ್ಕೆಲ್ಲಾ ನಾವು ಪ್ರತಿಕ್ರಿಯೆ ಕೊಡಲ್ಲ ಎಂದರು. ದೋಸ್ತಿ ಪಕ್ಷಗಳಲ್ಲಿ ಮುಂದಿನ ಸಿಎಂ ಜಟಾಪಟಿ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಅವರು, ನಾಲ್ಕು ಗೋಡೆಗಳ ಮಧ್ಯೆ ಕುಳಿತು ಮಾತನಾಡುವ ವಿಚಾರ ಇದು. ನಾವ್ಯಾರೂ ಪಕ್ಷಕ್ಕಿಂತ ದೊಡ್ಡವರಲ್ಲ. ನಮ್ಮ ರಾಷ್ಟ್ರೀಯ ನಾಯಕರು ಮೈತ್ರಿ ತೀರ್ಮಾನ ತೆಗೆದುಕೊಂಡರು. ನಾವ್ಯಾರೂ ವಿರೋಧ ಮಾಡದೆ ಒಪ್ಪಿಕೊಂಡಿದ್ದೇವೆ. ರಾಷ್ಟ್ರೀಯ ನಾಯಕರ ನಿರ್ಧಾರಕ್ಕೆ ನಾವು ತಲೆಬಾಗಲೇಬೇಕು. ಈ ನಿರ್ಣಯ ಎರಡೂ ಪಕ್ಷಗಳ ನಾಯಕರಿಗೂ ಅನ್ವಯವಾಗುತ್ತದೆ.



ಜೆಡಿಎಸ್‌ನವರು ಏನೇ ಹೇಳಿದರೂ ಮಾತನಾಡಬೇಡಿ ಎಂದು ನಮ್ಮ ನಾಯಕರಿಗೆ ಹೇಳಿದ್ದೇನೆ. ನಾವು ಕುಮಾರಸ್ವಾಮಿ ಜತೆ ಮಾತನಾಡುತ್ತೇವೆ. ರಾಜ್ಯದ ಈ ನಾಲಾಯಕ್ ಕಾಂಗ್ರೆಸ್ ಸರ್ಕಾರವನ್ನು ಒಟ್ಟಾಗಿ ತೆಗೆಯುವುದು ಎರಡೂ ಪಕ್ಷಗಳ ಗುರಿ. ಇನ್ನು ಹಲವು ವಿಚಾರ ಗಳಿವೆ. ನಾನೇ ಖುದ್ದು ಕುಮಾರಸ್ವಾಮಿಯವರ ಜತೆ ಚರ್ಚಿ ಸುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಶಾಂತರಾಮ್ ಸಿದ್ದಿ, ಪಕ್ಷ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಮಾಜಿ ಶಾಸಕ ನಿರಂಜನ್ ಉಪಸ್ಥಿತರಿದ್ದರು.

## ಹಲ್ಲೆ ಆರೋಪಿಗಳನ್ನು ಕೂಡಲೆ ಬಂದಿಸಬೇಕು: ಈರೇಶನಾಯಕ




ಧೈರ್ಯದ ದಾರಿ

**ಮಾನ್ವಿ,ಫೆ.16–** ಪಟ್ಟಣದ ಪತ್ರಿಕಾ ಭವನದಲ್ಲಿ ಅಮರೇಶ್ವರ ಕ್ಯಾಂಪಿನ ಈರೇಶನಾಯಕ ಮಾತನಾಡಿ ತಾಲೂಕಿನ ಅಮರೇಶ್ವರ ಕ್ಯಾಂಪಿನ ಹಾಲು ಉತ್ಪದಕರ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಎಸ್.ಸಿ. ಮತ್ತು ಎಸ್.ಟಿ. ಸದಸ್ಯರ ನೇಮಕಕ್ಕೆ ಶ್ರಮಿಸಿದ ಎಂ. ಪ್ರಕಾಶ ರವರ ಮೇಲೆ 6 ಜನರ ಗುಂಪು ಹಲ್ಲೆ ನಡೆಸಿದ್ದು ಈ ಕುರಿತು ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರು ಕೂಡ ಇದುವರೆಗೂ ಕೂಡ ಪೊಲೀಸರು ಹಲ್ಲೆ ಆರೋಪಿಗಳನ್ನು ಬಂದಿಸದೆ ಇರುವುದು ಸರಿಯಲ್ಲ ಅದ್ದರಿಂದ ಕೂಡಲೆ ಎಲ್ಲಾ ಅರೋಪಿತರನ್ನು ಬಂದಿಸ ಬೇಕು ಎಂದು ಒತ್ತಾಯಿಸಿದರು.
ರೈತ ಸಂಘದ ಜಿಲ್ಲಾಧ್ಯಕ್ಷರಾದ ಶಿವಾರ್ಜುನ ನಾಯಕ, ಮೌನೇಶನಾಯಕ ಮ್ಯಾಕಲ್,ನಾಗೇಂದ್ರ ಪ್ರಸಾದ್, ವಿಜಯಕುಮಾರ ಇದ್ದರು.

## ಎನ್ ಎಸ್ ರವಿ ಬೋಸುರಾಜು ಅವರ 53 ನೆಯ ಜನ್ಮದಿನ ನೆರಳು ಅನಾಥಾಶ್ರಮದಲ್ಲಿ ಆಚರಣೆ




ಧೈರ್ಯದ ದಾರಿ

**ಮಾನ್ವಿ,ಫೆ.16–**ಯುವಕರ ಕಣ್ಮಣಿ ಬಡವರ ಬಂಧು ದೀನದಲಿತರ ಆಶಾಕಿರಣ ಹಾಗೂ ರಾಜ್ಯ ಯುವ ಕಾಂಗ್ರೆಸ್ ಮುಖಂಡರಾದ ಸನ್ಮಾನ್ಯ ಶ್ರೀ ಎನ್ ಎಸ್ ರವಿ ಬೋಸುರಾಜು ಅವರ 53 ನೆಯ ಜನ್ಮದಿನ ಅಂಗವಾಗಿ ಇಂದು ಮಾನ್ವಿ ಪಟ್ಟಣದ ನೆರಳು ಅನಾಥಾಶ್ರಮದಲ್ಲಿ ಅವರ ಕೇಕ್ ಕತ್ತರಿಸುವ ಮುಖಾಂತರ ಅವರ ಹುಟ್ಟುಹಬ್ಬವನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು ಈ ಸಂದರ್ಭದಲ್ಲಿ ಇಲ್ಲಿರುವ ಅನಾಥರಿಗೆ ಹಣ್ಣು ಹಂಪಲು ಹಾಗೂ ಊಟದ ವ್ಯವಸ್ಥೆಯನ್ನು ಮಾಡಿಸಲಾಗಿತ್ತು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಯುವ ಮುಖಂಡರಾದ ಮಿರ್ಜಾ ಆದಮ್ ಬೇಗ ಅವರು ತಮ್ಮ ನಾಯಕರಾದ ಎನ್ ಎಸ್ ರವಿ ಬೋಸರಾಜ್ ಅವರ ಹುಟ್ಟುಹಬ್ಬ ಇದ್ದ ಕಾರಣ ಅಲ್ಲಿರುವ ಅನಾಥರಿಗೆ ತಮ್ಮ ಸ್ವಂತ ಹಣದಿಂದ 51,000 ರೂಪಾಯಿಗಳು ದೇಣಿಗೆ ನೀಡಿದರು ಈ ಸಂದರ್ಭದಲ್ಲಿ ಅವರು ಮಾತನಾಡಿ ಇಲ್ಲಿರುವಂತಹ ಅನಾಥರಿಗೆ ನಾವು ನಿಮ್ಮ ಜೊತೆಯಲ್ಲಿ ಇದ್ದೀವಿ ನೀವು ಯಾವುದೇ ಕಾರಣಕ್ಕೂ ನೀವು ಅನಾಥರಲ್ಲ ನಾವೆಲ್ಲರೂ ಒಂದು ಕುಟುಂಬ ರೀತಿಯಲ್ಲಿ ಬಾಳಬೇಕು ನಾವೆಲ್ಲರೂ ಮನುಷ್ಯರಾಗಿ ಹುಟ್ಟಿದ ಮೇಲೆ ಎಲ್ಲರೂ ಪ್ರೀತಿ ವಿಶ್ವಾಸದಿಂದ ಸಮಾಜದಲ್ಲಿ ಬಾಳಬೇಕು ಎಂದು ಹೇಳಿದರು ಅದೇ ರೀತಿ ನಮ್ಮ ನಾಯಕರಾದ ಎನ್ ಎಸ್ ರವಿ ಬೋಸರಾಜ ಅವರು ರಾಯಚೂರು ಜಿಲ್ಲೆಯಲ್ಲಿ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಮಾಡ್ತಾ ಇದ್ದಾರೆ *2ನೇ ಪುಟಕ್ಕೆ*

## ಗೃಹ ಆರೋಗ್ಯ ಯೋಜನೆಯ ಮಹತ್ವ ಅರಿಯೋಣ: ಡಾ.ಸುರೇಂದ್ರ ಬಾಬು ಸಲಹೆ

ಧೈರ್ಯದ ದಾರಿ

**ರಾಯಚೂರು ಫೆ,16–**ಆರ್ಥಿಕ ತೊಂದರೆಯುಳ್ಳ ನಗರದ ಪ್ರದೇಶದ ಜನತೆಗೂ ಸಹ ಶೀಘ್ರದಲ್ಲಿಯೇ ಗೃಹ ಆರೋಗ್ಯ ಯೋಜನೆಯನ್ನು ವಿಸ್ತರಿಸಿ ಸೌಲಭ್ಯ ಒದಗಿಸುವುದಕ್ಕೆ ಅಗತ್ಯ ಸಿದ್ಧತೆ ಕೈಕೊಳ್ಳಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು ಅವರು ಹೇಳಿದರು.

ಫೆ.16ರ ಸೋಮವಾರ ನಗರದ ಜಿಲ್ಲಾ ಆರೋಗ್ಯ ತರಬೇತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳ ವಿಭಾಗದಿಂದ ವಿವಿಧ ವೈದ್ಯಾಧಿಕಾರಿಗಳಿಗೆ, ಆರೋಗ್ಯ ನಿರೀಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರಿಗೆ ಹಮ್ಮಿಕೊಳ್ಳಲಾಗಿದ್ದ ಗೃಹ ಆರೋಗ್ಯ ಯೊಜನೆಯ ತರಬೇತಿ ಕಾರ್ಯಾ ಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕರ್ನಾಟಕ ಸರಕಾರವು ಆರೋಗ್ಯ ಸೇವೆ–ಮನೆ ಬಾಗಿಲಿಗೆ ಎಂಬ ಧ್ಯೇಯದಡಿ ಜೀವನ ಶೈಲಿಯ ಖಾಯಿಲೆಗಳಾದ ರಕ್ತದೊತ್ತಡ, ಸಕ್ಕರೆ ಖಾಯಿಲೆ ಜೊತೆ ಜೊತೆಗೆ ಕ್ಯಾನ್ಸರ್ ಪತ್ತೆ ಹಾಗೂ ಚಿಕಿತ್ಸೆ ಸೇರಿದಂತೆ 14 ವಿವಿಧ ಆರೋಗ್ಯ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಿದಂತೆ ನಗರದ ಪ್ರದೇಶದ ಅರ್ಥಿಕ ತೊಂದರೆಯುಳ್ಳ ಜನತೆಗೂ ಸಹ ಶೀಘ್ರದಲ್ಲಿಯೇ ಒದಗಿಸಲು ನಿರ್ಧರಿಸಲಾ ಗಿದ್ದು, ಈ ದಿಶೆಯಲ್ಲಿ ಎಲ್ಲರೂ



ಜನತೆಗೆ ಗುಣಮ ಟ್ಟದ ಆರೋಗ್ಯ ಸೇವೆ ನೀಡಲು ತರಬೇತಿಯ ಮಹತ್ವ ಪಡೆದುಕೊಳ್ಳಬೇಕು ಎಂದರು.

ಆರ್ಥಿಕ ದುರ್ಬಲ ವರ್ಗದದವರಿಗೆ ಮನೆ ಮಟ್ಟದಲ್ಲೇ ಆರೋಗ್ಯದ ಸೌಲಭ್ಯ ದೊರಕಿಸಿ ಅವರ ಕುಟುಂಬಕ್ಕಾಗುವ ಆರ್ಥಿಕ ಹೊರೆಯನ್ನು ದೂರಮಾಡಲು ಗೃಹ ಆರೋಗ್ಯದಡಿ ಅಧಿಕ ರಕ್ತದೊತ್ತಡ, ಮಧುಮೇಹ, ಮೂತ್ರ ಪಿಂಡದ ಖಾಯಿಲೆ, ಲಿವರ ಸಮಸ್ಯೆ, ಕ್ಯಾನ್ಸರ್, ತಾಯಿ ಮಗುವಿನ ಆರೋಗ್ಯ, ರಕ್ತ ಹೀನತೆ, ಮಾನಸಿಕ ಕಾಯಿಲೆ, ಕ್ಷಯರೋಗ ಲಕ್ಷಣಗಳು ಮುಂತಾದವುಗಳನ್ನು ಶೀಘ್ರವಾಗಿ ಪತ್ತೆ ಹಚ್ಚಿ ಚಿಕಿತ್ಸೆಯನ್ನು ಕೊಡಿಸುವ ಮಹತ್ವಾಕಾಂಕ್ಷಿ ಉದ್ದೇಶವನ್ನು ತರಬೇತಿಯಲ್ಲಿ ಅರ್ಥೈಸಿಕೊಂಡು ಸಮರ್ಪಣಾ ಭಾವದಿಂದ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ನಂದೀತಾ ಎಮ್.ಎನ್., ಡಿಪಿಡಿಓ ಡಾ.ಚಂ ದ್ರಶೇಖರಯ್ಯ ಸ್ವಾಮಿ, ತಜ್ಞ ವೈದ್ಯರಾದ ಡಾ.ಶ್ರೀ ನಿವಾಸ್, ಡಾ.ವಂದನಾ, ಡಾ.ಮನೋಹರ ಪತ್ತಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಅಮೃತ್ ಹಕ್ಕೆರಿ, ಡಿಹೆಚ್‌ಇಓ ಈಶ್ವರ ಹೆಚ್.ದಾಸಪ್ಪನವರ, ಡಿಡಿಎಮ್ ಲೋಕೇಶ್, ಡಿವೈಹೆಚ್‌ಇಓ ಬಸಯ್ಯ, ಜಿಲ್ಲಾ ಆಶಾ ಮೇಲ್ವಿಚಾರಕಿ ಶಾರೂನ್, ಬಿಹೆಚ್‌ಇಓ ಸರೋಜಾ ಕೆ, ಹಿರಿಯ ಹೆಚ್‌ಐಓ ಸುರೇಶ್, ಆಶಾ ಮೇಲ್ವಿಚಾರಕಿ ಮರಿಯಾಳಮ್ಮ ಸೇರಿದಂತೆ ಇತರರು ಇದ್ದರು.

## ಪತ್ರಕರ್ತರ ತುರ್ತು ನಿಧಿ ಯೋಜನೆ ರೂಪಿಸಿದ ರಾಯಚೂರು ರಿಪೋರ್ಟರ್ಸ್ ಗಿಲ್ಡ್ ಕಾರ್ಯ ಶ್ಲಾಘನೀಯ



ಧೈರ್ಯದ ದಾರಿ

**ರಾಯಚೂರು ಫೆ,16–** ರಾಯಚೂರು ರಿಪೋರ್ಟ ರ್ಸ್ ಗಿಲ್ಡ್ ರೂಪಿಸಿರುವ ಪತ್ರಕರ್ತರ ತುರ್ತು ನಿಧಿಯಿಂದ ಹಿರಿಯ ಪತ್ರಕರ್ತ ದಿ.ಸೈಯ ದ್ ಅಶ್ರಫ್ ಅವರ ಕುಟುಂಬಕ್ಕೆ 1 ಲಕ್ಷ ರೂಪಾಯಿ ಚೆಕ್ ವಿತರಣೆ ಕಾರ್ಯಕ್ರಮ ಫೆ.16ರಂದು ನಡೆಯಿತು.

ರಾಯಚೂರು ಪ್ರವಾಸದಲ್ಲಿದ್ದ, ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಮುಖ್ಯ ಸಚೇತಕರಾದ ಸಲೀಂ ಅಹ್ಮದ್ ಅವರು ನಗರದ ಪತ್ರಿಕಾ ಭವನಕ್ಕೆ ಆಗಮಿಸಿ ಸೈಯದ್ ಅಶ್ರಫ್ ಅವರ ಕುಟುಂಬದವರಿಗೆ ಪತ್ರಕರ್ತರ ಸಮಕ್ಷಮದಲ್ಲಿ ಚೆಕ್ ವಿತರಿಸಿದರು.

ಈ ವೇಳೆ ಸಲೀಂ ಅಹ್ಮದ್ ಅವರು ಮಾತನಾಡಿ, ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದು ಪತ್ರಿಕಾವೃತ್ತಿಯ ಘನತೆ ಬಗ್ಗೆ ವಿವರಿಸಿದರು.

ರಾಯಚೂರು ರಿಪೋರ್ಟರ್ಸ್ ಗಿಲ್ಡ್ ತುರ್ತು ನಿಧಿಗೆ ಅನುದಾನ ಒದಗಿಸುವ ಕುರಿತು ಮುಖ್ಯಮಂ ತ್ರಿ ಹಾಗೂ ಮಾಧ್ಯಮ ಸಲಹೆಗಾರರೊಂದಿಗೆ ಚರ್ಚೆ ನಡೆಸಲಾಗುವುದು. ಗಿಲ್ಡನ ಬೆಳ್ಳಿ ಮಹೋತ್ಸವ ಕಾರ್ಯಕ್ರಮಕ್ಕೂ ಸಹಕಾರ ನೀಡುವುದಾಗಿ ಅವರು ಭರವಸೆ ನೀಡಿದರು. ಪತ್ರಕರ್ತರ ಹಿತಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದರು.

ಇದಕ್ಕು ಮೊದಲು ಗಿಲ್ಡನ ಅಧ್ಯಕ್ಷ ವಿಜಯ ಜಾಗಟಗಲ್ ಅವರು ಮಾತನಾಡಿ, ಸೈಯದ್ ಅಶ್ರಫ್ ಅವರ ಪತ್ರಿಕಾ ಸೇವೆಯ ಬಗ್ಗೆ ವಿವರಿಸಿದರು.

ನಗರದಲ್ಲಿ 200ಕ್ಕು ಹೆಚ್ಚು ಪತ್ರಕರ್ತರು ಕಾರ್ಯನಿರ್ವಹಿಸುತ್ತಿದ್ದು, ಅವರಿಗಾಗಿ ತುರ್ತು ನಿಧಿ, ಆರೋಗ್ಯ ವಿಮೆ ಸೇರಿದಂತೆ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ, ರಾಜ್ಯ ನೀತಿ ಆಯೋಗದ ಸದಸ್ಯರಾದ ಡಾ.ರಝಾಕ್ ಉಸ್ತಾದ್, ಕಾರ್ಯ ನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಆರ್.ಗುರುನಾಥ, ರಾಜ್ಯ ಸಮಿತಿ ಸದಸ್ಯ ಬಸವ ರಾಜ ನಾಗಡದಿನ್ನಿ, ಮುಖಂಡರಾದ ಬಷೀರುದ್ದಿನ್, ಮಹಮ್ಮದ್ ಶಾಲಂ, ಅಸ್ಲಂ ಪಾಷಾ, ರುದ್ರಪ್ಪ ಅಂಗಡಿ ಸೇರಿದಂತೆ ಜಿಲ್ಲೆಯ ಹಿರಿಯ, ಕಿರಿಯ ಪತ್ರಕರ್ತರು ಇದ್ದರು.

## ಬೇಸಿಗೆಗೂ ಮುನ್ನ ಕುಡಿಯುವ ನೀರಿಗಾಗಿ ಹಾಹಾಕಾರ:ಚಿಕ್ಕಕೊಟ್ನೇಕಲ್ ಗ್ರಾಮಸ್ಥರಿಂದ ಗ್ರಾಪಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ

ಧೈರ್ಯದ ದಾರಿ




**ಮಾನ್ವಿ:ಫೆ.16–** ತಾಲೂಕಿನ ಚಿಕ್ಕಕೊಟ್ನೇಕಲ್ ಗ್ರಾಮದ ನೂರಾರು ಜನರು ಗ್ರಾಮ ಪಂಚಾಯಿತಿಗೆ ಬೀಗ ಹಾಕಿ ಕುಡಿಯುವ ನೀರಿನ ಸಮರ್ಪಕ ಪೂರೈಕೆ ಮಾಡದೆ ಇರುವ ದನ್ನು ಖಂಡಿಸಿ ಪ್ರತಿಭಟನೆ ನಡೆಸಿದರು.
ಗ್ರಾಮದ ಮಹಿಳೆ ಬಸಮ್ಮ ಮಾತನಾಡಿ ಗ್ರಾಮ ಪಂಚಾಯಿತಿ ಯಿಂದ ಕಳೆದ ಒಂದು ತಿಂಗಳಿಂದ ಮನೆಗಳಿಗೆ ಕುಡಿಯುವ ನೀರು ಪೂರೈಕೆ ಮಾಡದೆ ಇರುವುದರಿಂದ ನಿತ್ಯ ಜೀವನ ನಡೆಸುವುದೆ ತೊಂದರೆಯಾಗಿದೆ, ನಿತ್ಯ 3 ಕಿ.ಮೀ.ದೂರ ಇರುವ ನಲ್ಗಂದಿನ್ನಿ ಗ್ರಾಮದ ಹಳ್ಳದಲ್ಲಿ ಬಟ್ಟೆ ತೋಳೆದು ಕೊಂಡು ಬರಬೇಕಾಗಿದೆ. ಕುಡಿಯುವ ನೀರನ್ನು 2 ಕಿ.ಮೀ.ದೂರದ ಉಮಳಿ ಹೊಸೂರು ಗ್ರಾಮದಿಂದ ತರಬೇಕಾಗಿದೆ ಅದು ವಿದ್ಯುತ್ ಇದ್ದರೆ ಮಾತ್ರ ನೀರು ಇಲ್ಲದೆ ಇದ್ದರು ವಿದ್ಯುತ್ ಬರುವ ವರೆಗೂ ಕಾಯ ಬೇಕಾಗಿದೆ. ಗ್ರಾಮದ ಒಂಟಿ ಮಹಿಳೆಯರು, ಬಣಂತಿಯರು, ಗರ್ಭಿಣಿಯರು, ವೃದ್ದರು ನೀರಿಗಾಗಿ ತೊಂದರೆ ಅನುಭವಿಸುವಂತಾಗಿದೆ. ದ್ವಿಚಕ್ರ ವಾಹನ ಇದ್ದವರಿಗೆ ಅಷ್ಟೆ ಬಳಸಲು ನೀರು ಎನ್ನುವಂತಾಗಿದೆ ಶಾಲೆಯ ಮಕ್ಕಳಿಗೆ ಅಗತ್ಯ ವಿರುವ ಬಳಕೆ ನೀರು,ಕುಡಿಯುವ ನೀರು ಇಲ್ಲದೆ ಶಾಲೆಯ ಮಕ್ಕಳು ತೊಂದರೆ ಅನುಭವಿಸುತ್ತಿದ್ದಾರೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಅನೇಕ ಬಾರಿ ಕುಡಿಯುವ ನೀರಿನ ಪೂರೈಕೆ ಮಾಡುವಂತೆ ಮನವಿ ಮಾಡಿಕೊಂಡರು ಕೂಡ ಸ್ಪಂದಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.
ಗ್ರಾಮದ ನಿವಾಸಿ ರಮೇಶ ಭೋವಿ ಮಾತನಾಡಿ ಗ್ರಾಮದಲ್ಲಿ 700 ಕ್ಕೂ ಹೆಚ್ಚು ಮನೆಗಳಿದ್ದು, 3 ಸಾವಿರಕ್ಕೂ ಹೆಚ್ಚು ಜನರು ವಾಸವಿರುವ ಗ್ರಾಮಕ್ಕೆ ಹಾಕಿರುವ ಜೆ.ಜೆ.ಎಂ. ನಳ ಸಂಪರ್ಕ ಹೆಸರಿಗೆ ಮಾತ್ರ ಎನ್ನುವಂತಾಗಿದು ಇದುವರೆಗೂ ಒಂದು ಹನಿ ನೀರು ಕೂಡ ಬಂದಿಲ್ಲ ಗ್ರಾಮ ಪಂಚಾಯಿತಿಯಿಂದ ಕುಡಿಯುವ ನೀರಿಗಾಗಿ ಕೊಳವೆಬಾವಿ ಹಾಕಿದರು ಕೂಡ ಮೋಟರ್ ಸರಿಯಾದ ನಿರ್ವಾಹಣೆ ಇಲ್ಲದೆ ಇರುವುದರಿಂದ ಪದೆ ಪದೆ ದುರಸ್ಥಿಗೆ ಬರುತ್ತದೆ ಒಮ್ಮೆ ದುರಸ್ಥಿಗೆ ಬಂದರೆ 6 ತಿಂಗಳಾದರು ದುರಸ್ಥಿಯಾಗುವುದಿಲ್ಲ ಗ್ರಾಮ ಪಂಚಾಯಿತಿಗೆ ಕುಡಿಯುವ ನೀರು ಮತ್ತು ನೈರ್ಮಾಲ್ಯ ಅಧಿಕಾರಿ ಸತೀಶ್ ಅವರೆ ಆಡಳಿತಾಧಿಕಾರಿಯಾಗಿ ಬಂದಿದ್ದರು ಕೂಡ ಗ್ರಾಮದ ಜನರಿಗೆ ಕುಡಿಯುವ ನೀರು ದೊರೆಯುತ್ತಿಲ್ಲ ಎನ್ನುತ್ತಾರೆ.ತಾಲೂಕಿನಲ್ಲಿ ಇನ್ನೂ ಬೇಸಿಗೆ ಕಾಲ ಬಂದಿಲ್ಲವಾದರೂ ಕೂಡ ನೀರಿಗಾಗಿ ಜನರು ಪರಿತಪಿಸುವಂತಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಜನಪ್ರತಿನಿಧಿಗಳ ಆಡಳಿತ ಕೊನೆಗೊಂಡು ಅಧಿಕಾರಿಗಳ ಆಡಳಿತ ಬಂದ ನಂತರವಂತು ಗ್ರಾಮದ ಜನರಿಗೆ ಹನಿ ನೀರಿಗೂ ಕೂಡ ಪರದಾಡುವಂತಾಗಿದೆ. 2ನೇಪುಟಕ್ಕೆ►

**ಮೊದಲನೇ ಪುಟದಿಂದ**

## ಬೇಸಿಗೆಗೂ ಮುನ್ನ ಕುಡಿಯುವ ನೀರಿಗಾಗಿ ಹಾಹಾಕಾರ:ಚಿಕ್ಕಕೊಟ್ನೇಕಲ್ ಗ್ರಾಮಸ್ಥರಿಂದ ಗ್ರಾಪಂ ಕಚೇರಿಗೆ ಬೀಗ ಜಡಿದು ಪ್ರತಿಭಟನೆ

ಚಿಕ್ಕಕೊಟ್ನೇಕಲ್ ಗ್ರಾಮದಲ್ಲಿನ ಕೋಳವೆ ಬಾವಿಯಲ್ಲಿ ಅಳವಡಿಸಿರುವ ಮೋಟರ್ ಕೇಟುಹೊಗಿದ್ದು ದುರಸ್ಥಿ ಮಾಡಿಸಲಾಗುವುದು ಕೊಳವೇ ಬಾವಿಗೆ ಹೊಸ ಮೋಟರ್ ಕುಡಿಸುವುದಕ್ಕೆ ಪ್ರಸ್ಥವನೆ ಸಲ್ಲಿಸಲಾಗಿದ್ದು ಅನುಮೋದನೆ ದೊರೆತ ನಂತರ ಹೋಸ ಮೋಟರ್ ಅಳವಡಿಸಿ ಸಮರ್ಪಕವಾಗಿ ನೀರು ಪೂರೈಸುವುದಕ್ಕೆ ಕ್ರಮ ಕೈಗೊಳ್ಳಲಾಗುವುದು ಎನ್ನುತ್ತಾರೆ.
***ಶಿವಗೇನಿ**
**ಚಿಕ್ಕಕೊಟ್ನೇಕಲ್ ಗ್ರಾಮ ಪಂಚಾಯಿತಿ ಅಭಿವೃದ್ದಿ ಅಧಿಕಾರಿ.**

ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆಯ ಅಡಿಯಲ್ಲಿ ಮಾನ್ವಿ ತಾಲ್ಲೂಕಿನ ಚಿಕ್ಕಕೊಟ್ನೇಕಲ್ ಗ್ರಾಪಂ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿ ಜೆಜೆಎಮ್ ಯೋಜನೆಯ ಕಾಮಗಾರಿಯನ್ನು ಗುತ್ತಿಗೆದಾರರು ಹಾಗೂ ಅಧಿಕಾರಿಗಳು ಸೇರಿಕೊಂಡು ಕಳಪೆ ಮಟ್ಟದ ಕೆಲಸ ಮಾಡುವುದರೊಂದಿಗೆ ಕೋಟಿ ಕೋಟಿ ಹಣ ದುರ್ಬಳಕೆ ಮಾಡಿಕೊಂಡಿರುತ್ತಾರೆ. ಅಂಥವರ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಹೋರಾಟಕ್ಕೂ ಸಿದ್ದರಾಗಿದ್ದೇವೆ. ***'ತಾಯಣ್ಣ ನಾಯಕ, ಚಿಕ್ಕಕೊಟ್ನೆಕಲ್**

ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಗ್ರಾಮೀಣ ಭಾಗದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂಬ ಉದ್ದೇಶದಿಂದ ಹತ್ತಾರು ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದಾರೆ.ಆದರೆ ನದಿ ಪಾತ್ರದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೆಯೇ ಉಳಿದುಕೊಂಡಿದೆ.ಇನ್ನಾದರೂ ಜಿಲ್ಲಾ ಆಡಳಿತ ಎಚ್ಚೆತ್ತುಕೊಂಡ ನಮ್ಮ ಗ್ರಾಮಗಳಲ್ಲಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಜನರ ಸಮಸ್ಯೆಗಳ ಸ್ಪಂದಿಸದ ಪಿಡಿಓ ಶಿವಗೇನಿ ಅವರು ಸರಿಯಾಗಿ ಪಂಚಾಯಿತಿ ಬಾರದೇ ತಿಂಗಳಗೋಮ್ಮೆ ಪಂಚಾಯಿತಿಗೆ ಬಂದು ಎಲ್ಲಾ ದಿನಗಳ ಸಹಿ ಒಂದೆ ಬಾರಿ ಮಾಡಿ ಹೊರಟು ಹೋಗುವ ಪಿಡಿಓ ನಮಗೆ ಬೇಡ. ಸಾರ್ವಜನಿಕರುಓ ಸಮಸ್ಯೆಗಳ ಕುರಿತು ಕರೆ ಮಾಡಿದರೆ ಕರೆಯನ್ನು ಬಿಜಿ ಟೋನ್ಸೆ ಸೇರಿಸುವುದು ಅಥವಾ ಬ್ಲಾಕ್ ಲಿಸ್ಟಿಗೆ ಹಾಕುತ್ತಾರೆ. ವಿವಿಧ ಗ್ರಾಮಗಳಲ್ಲಿ ಹಲವಾರು ಮೂಲ ಸಮಸ್ಯೆಗಳಿಂದ ನರಳುತ್ತಿದ್ದು ಸ್ಥಳದಲ್ಲಿದ್ದು ಯೋಜನೆಯನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಬೇಕಾದ ಪಿಡಿಓ ಹಾಗೂ ಸಿಬ್ಬಂದಿಯವರು ಅನಧಿಕೃತವಾಗಿ ಗೈರು ಹಾಜರಾಗುತ್ತಿದ್ದರಿಂದ ಗ್ರಾಮಸ್ಥರಿಗೆ ದಿಕ್ಕು ತೋಚದಂತಾಗಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳು ಇವರ ಮೇಲೆ ಸೂಕ್ತ ಕಾನೂನಿನ ಕ್ರಮ ಕೈಗೊಳ್ಳಬೇಕು ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಗ್ರಾಮಸ್ಥರು ಸೇರಿ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ಮುಂದೆ ಉಗ್ರವಾದ ಹೋರಾಟವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು. ***ಮೌಲಾಲಿ ನಾಯಕ ಚಿಕ್ಕಕೊಟ್ನೇಕಲ್ ಗ್ರಾಮಸ್ಥ**

### ಎನ್ ಎಸ್ ರವಿ ಬೋಸುರಾಜು ಅವರ 53 ನೆಯ ಜನ್ಮದಿನ ನೆರಳು ಅನಾಥಾಶ್ರಮದಲ್ಲಿ ಆಚರಣೆ

ಅವರು ಎಲ್ಲ ಜಾತಿ ಜನಾಂಗದವರನ್ನು ಪ್ರೀತಿಸುವಂಥ ಏಕೈಕ ನಾಯಕರಾಗಿದ್ದಾರೆ ಅವರಿಗೆ ದೇವರು ಆರೋಗ್ಯ ಆಯಸ್ಸು ಕೊಟ್ಟು ಕಾಪಾಡಲಿ ಎಂದು ಹೇಳಿದರು ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರದ. ಮಿರ್ಜಾ ಆದಮ್ ಬೇಗ. ಬ್ರಹ್ಮಣ ಸಮಾಜ ಅಧ್ಯಕ್ಷರಾದ ವಿಜಯಕುಮಾರ್ ಹಾಗೂ ಕಾಂಗ್ರೆಸ್ ಯುವ ನಾಯಕರಾದ ಮೊಹಮ್ಮದ್ ರೆಹ್ಮತ್ ಅಲಿ ಹಾಗೂ ಮೊಹಮ್ಮದ್ ಆಶಿಮ್ ಖುರೇಷಿ. ಹಂಪಯ್ಯ ನಾಯಕ್ ಬೆಳಗಿನ ಪೇಟೆ. ಸೈಯದ್ ರಶೀದ್. ಕಾಮೇಶ್ ಮಂದಕಲ್. ಅಬ್ದುಲ್ ಲತೀಫ್. ಮುಸ್ತಫ ಕುರೇಶಿ. ಸೈಯದ್ ಮುಸ್ತಫಾ ಕಪಗಲ್ .ಕೆ ಸಮೀರ್ ಪಾಷಾ. ವಿನೋದ್ ನಾಯಕ್. ಪ್ರಕಾಶ್. ಆಲಂ ಬಾಷಾ. ಸಮೀರ್. ವಿರುಪಾಕ್ಷಿ ನಾಯಕ್. ಸೈಯದ್ ಸಲೀಂ. ಶರಣಬಸವ. ಶಂಶು ಖುರೇಶಿ. ಚಾಂದ್ ಪಾಷಾ. ಹನುಮಂತ. ಹಾಗೂ ಹಲವಾರು ಕಾಂಗ್ರೆಸ್ ಪಕ್ಷದ ಯುವ ಮುಖಂಡರು ಪಾಲ್ಗೊಂಡಿದ್ದರು

## ಹುಟ್ಟುಹಬ್ಬದ ಸಂಭ್ರಮದ ನಡುವೆ ಮಾನವೀಯತೆ: ಆಸ್ಪತ್ರೆ ರೋಗಿಗಳಿಗೆ ಹಣ್ಣು ವಿತರಿಸಿದ ರವಿ ಬೋಸರಾಜ್ ಬೆಂಬಲಿಗರು."






ಧೈರ್ಯದ ದಾರಿ

**ಸಿರವಾರ,ಫೆ.16–** ಯುವಕರ ಕಣ್ಮಣಿ ( ಯುವಕರಿಗೆ ಸ್ಫೂರ್ತಿ ) ಯುವ ನಾಯಕ ರವಿ ಬೋಸರಾಜ್ ಅವರ ಜನ್ಮದಿನದ ಅಂಗವಾಗಿ ಇಂದು ಸಿರವಾರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಗಿಗಳಿಗೆ ಹಣ್ಣು-ಹಂಪಲು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.
ರವಿ ಬೋಸರಾಜ್ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಆರೋಗ್ಯ ವಿಚಾರಿಸಿದರು. ನಂತರ ಪ್ರತಿಯೊಬ್ಬರಿಗೂ ಹಣ್ಣು ಮತ್ತು ಸಿಹಿ ಹಂಚಿ ಸಂಭ್ರಮಿಸಿದರು.
**ಸಮಾಜಮುಖಿ ಕಾರ್ಯ:** ಜನ್ಮದಿನದ ಅಂಗವಾಗಿ ಕೇಕ್ ಕತ್ತರಿಸುವ ಬದಲು, ಆಸ್ಪತ್ರೆಯ ರೋಗಿಗಳಿಗೆ ಸಹಾಯ ಮಾಡುವ ಮೂಲಕ ಅಭಿಮಾನಿಗಳು ಮಾದರಿಯಾದರು.
ಶುಭಾಶಯಗಳ ಮಹಾಪೂರ: ಸಿರವಾರ ತಾಲ್ಲೂಕಿನಾದ್ಯಂತ ರವಿ ಬೋಸರಾಜ್ ಅವರ ಪರವಾಗಿ ಅಭಿನಂದನಾ ಬ್ಯಾನರ್‌ಗಳು ರಾರಾಜಿಸುತ್ತಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಶುಭಾಶಯಗಳ ಸುರಿಮಳೆಯೇ ಹರಿಯುತ್ತಿದೆ.
**ನಾಯಕರ ಹಾರೈಕೆ:** "ರವಿ ಬೋಸರಾಜ್ ಅವರು ಯುವಜನತೆಗೆ ಸ್ಫೂರ್ತಿಯಾಗಿದ್ದು, ಅವರ ನೇತೃತ್ವದಲ್ಲಿ ತಾಲ್ಲೂಕಿನಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳು ನಡೆಯಲಿ," ಎಂದು ಕಾರ್ಯಕರ್ತರು ಆಶಿಸಿದರು.
ಈ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು, ರವಿ ಬೋಸರಾಜ್ ಅಭಿಮಾನಿ ಬಳಗದ ಸದಸ್ಯರು ಮತ್ತು ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ. ಮಾಜಿ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ವೈಭೂಪನಗೌಡ. ಶ್ರೀನಿವಾಸ್ ಜಾಲಪುರ್. ಸೂರಿ ದುರ್ಗಣ್ಣ. ಹೆಚ್‌ಕೆ ಅಮರೇಶ್. ಮಾಜಿ ಪಟ್ಟಣ ಪಂಚಾಯತ್ ಉಪಾಧ್ಯಕ್ಷರಾದ ಚನ್ನಬಸವ ಗಡ್ಲ. ಇರ್ಫಾನ್ ಬಡೆಗರ್.ಪಾಷಾ ಬಡೆಘರ್. ಅಬ್ರಹಾಂ ಹೊನಟಗಿ ರಂಗನಾಥ್ ನಾಯಕ್.ಬಸವರಾಜ್ ಗಡ್ಲ. ಚುಕ್ಕಿ ಉಮಾಪತಿ. ಶಿವು ಬೆಳವಿನೂರ್ .ಬಸವರಾಜ್ ದಳಪತಿ. ಯುವ ಘಟಕ ಅಧ್ಯಕ್ಷ ಮಹಮ್ಮದ್ ರಫಿ ಚಂದ್ರು ಹಡಪದ.ಹಲವಾರು ಕಾರ್ಯಕರ್ತರು ಉಪಸ್ಥಿತರಿದ್ದರು ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ತುಪ್ಪದೂರು ಚನ್ನಯ್ಯ ತಾತನವರ 33ನೇ ಜಾತ್ರ ಮಹೋತ್ಸವ : ಸಾಮೂಹಿಕ ವಿವಾಹ : ಕವಿತಾಳ



ಧೈರ್ಯದ ದಾರಿ

**ಕವಿತಾಳ,ಫೆ.16–** ಪಟ್ಟಣ ಸಮೀಪದ ಪಾಮನಕಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತುಪ್ಪದೂರು ಗ್ರಾಮದಲ್ಲಿ, ಆರಾಧ್ಯ ದೈವ ಶ್ರೀ ಚನ್ನಯ್ಯ ತಾತನವರ 33ನೇ ವರ್ಷದ ಜಾತ್ರಾ ಮಹೋತ್ಸವವು ಸೋಮವಾರ ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು.
**ಪುರಾಣ ಮತ್ತು ಸಾಮೂಹಿಕ ವಿವಾಹ ಪರಂಪರೆ:** ಪ್ರತಿ ವರ್ಷ 23 ದಿನಗಳ ಕಾಲ ಪುರಾಣ ನಡೆಯುತ್ತದೆ, ಮತ್ತು ಕಳೆದ 33 ವರ್ಷಗಳಿಂದಲೂ ಪ್ರತಿ ವರ್ಷ ಜಾತ್ರೆಯ ಸಂದರ್ಭದಲ್ಲಿ ತಪ್ಪದೇ ಉಚಿತ ಸಾಮೂಹಿಕ ವಿವಾಹಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಧಾರ್ಮಿಕ ಆಚರಣೆಯ ಜೊತೆಗೆ ಸಮಾಜಮುಖಿ ಕಾರ್ಯವನ್ನೂ ನಡೆಸಿಕೊಂಡು ಬರುತ್ತಿರುವ ಪರಂಪರೆ ಇಲ್ಲಿ ಬೆಳೆದು ಬಂದಿದೆ, ಅದರಂತೆ ಈ ಬಾರಿಯೂ, ಜಾತ್ರಾ ಮಹೋತ್ಸವದ ಶುಭ ಸಂದರ್ಭದಲ್ಲಿ ಶ್ರೀ ತಾತನವರ ಸನ್ನಿಧಾನದಲ್ಲಿ 6 ನವಜೋಡಿಗಳು ಹಿರಿಯರ ಸಮ್ಮುಖದಲ್ಲಿ ಮಾಂಗಲ್ಯ ಧಾರಣೆ ಮಾಡುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ನವದಂಪತಿಗಳಿಗೆ ನೆರೆದಿದ್ದ ಭಕ್ತಾದಿಗಳು ಅಕ್ಷತೆ ಹಾಕಿ ಶುಭ ಹಾರೈಸಿದರು.
**ಸೋಮವಾರ ಸಂಜೆ ಅದ್ದೂರಿ ರಥೋತ್ಸವ:** ಜಾತ್ರೆಯ ಪ್ರಮುಖ ಆಕರ್ಷಣೆಯಾದ ರಥೋತ್ಸವವು ಸೋಮವಾರ ಸಂಜೆ ವಿಜೃಂಭಣೆಯಿಂದ ಜರುಗಿತು. ಸಕಲ ವಾದ್ಯಮೇಳಗಳು ಮತ್ತು ಭಜನೆಗಳೊಂದಿಗೆ, ಅಲಂಕೃತ ರಥವನ್ನು ಎಳೆಯಲಾಯಿತು. ಸಾವಿರಾರು ಭಕ್ತರು ರಥಕ್ಕೆ ಬಾಳೆಹಣ್ಣು, ಉತ್ತತ್ತಿ ಎಸೆದು ಭಕ್ತಿ ಸಮರ್ಪಿಸಿದರು.
ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕರು ಮಲ್ಲಿಕಾರ್ಜುನ ಸ್ವಾಮಿ, ಜಾತ್ರಾ ಸಮಿತಿಯ ಅಧ್ಯಕ್ಷ ವಿರುಪಾಕ್ಷಯ್ಯ ಸ್ವಾಮಿ, ಗ್ರಾಮದ ಮುಖಂಡರುಗಳಾದ ಗಂಗಪ್ಪ ನಾಯಕ, ಲಕ್ಷ್ಮಣ ನಾಯಕ, ಶಿವುಕುಮಾರ, ಆದೇಶ, ಮಲ್ಲಿಕಾರ್ಜುನ ಯಾದವ, ಅಯ್ಯಪ್ಪ ಹೊಸಮನಿ, ಸಮಿತಿಯ ಪದಾಧಿಕಾರಿಗಳು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಉಪಸ್ಥಿತರಿದ್ದರು.

## ಸರಕಾರಿ ಉರ್ದು ಪ್ರೌಢಶಾಲೆ 10ನೇ ತರಗತಿ ವಿದ್ಯಾರ್ಥಿಗಳಿಗೆ ಭಾವಪೂರ್ಣ ಬೀಳ್ಕೊಡುಗೆ



ಧೈರ್ಯದ ದಾರಿ

**ಕವಿತಾಳ,ಫೆ.16–** ಪಟ್ಟಣದ ಸರಕಾರಿ ಉರ್ದು ಪ್ರೌಢಶಾಲೆಯಲ್ಲಿ 2025-26ನೇ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಭಾವಪೂರ್ಣವಾಗಿ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶಾಲೆಯ ಮುಖ್ಯಗುರು ಮುಬೀನ್ ಪೀರಜಾದೆ ಮಾತನಾಡಿ ಎಸ್.ಎಸ್.ಎಲ್.ಸಿ ಪರೀಕ್ಷೆ ಎಂಬುದು ಜೀವನದ ಮೆಟ್ಟಿಲು ಇದಕ್ಕೆ ಭಯಪಡುವ ಅಗತ್ಯವಿಲ್ಲ. ಶ್ರದ್ಧೆ ಮತ್ತು ಏಕಾಗ್ರತೆಯಿಂದ ಓದಿದರೆ ಯಶಸ್ಸು ಖಂಡಿತ ಎಂದರು, ಅತಿಥಿಯಾಗಿ ಆಗಮಿಸಿದ ಅಲ್ತಾಫ್‌ಸಾಬ್ ಮಾತನಾಡಿ ಶಾಲೆಯಲ್ಲಿ ಕಲಿತ ಶಿಸ್ತು ಮತ್ತು ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಉತ್ತಮ ಪ್ರಜೆಗಳಾಗಿ ಶಾಲೆಗೆ ಮತ್ತು ಪೋಷಕರಿಗೆ ಕೀರ್ತಿ ತನ್ನಿ ಎಂದರು, ಸಿಆರ್‌ಪಿ ಮೊ.ರಫೀಕ್ ಮಾತನಾಡಿ ವಿಧ್ಯಾರ್ಥಿಗಳು ಉತ್ತಮ ಅಂಕಗಳಿಸಿ ಶಾಲೆಗೆ ಒಳ್ಳೆಯ ಹೆಸರು ತರಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.
**ಬಾವುಕರಾದ ವಿದ್ಯಾರ್ಥಿಗಳು:** ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ 10ನೇ ತರಗತಿಯ ವಿದ್ಯಾರ್ಥಿಗಳು, ಶಾಲೆಯೊಂದಿಗಿನ ತಮ್ಮ ಒಡನಾಟ, ಶಿಕ್ಷಕರ ಮಾರ್ಗದರ್ಶನ ಮತ್ತು ಸ್ನೇಹಿತರೊಂದಿಗಿನ ನೆನಪುಗಳನ್ನು ಸ್ಮರಿಸಿ ಕಣ್ಣೀರು ಹಾಕಿದರು. ತಾವು ಎಲ್ಲೇ ಹೋದರೂ ಈ ಶಾಲೆಯನ್ನು ಮರೆಯುವುದಿಲ್ಲ ಎಂದು ಭಾವುಕರಾಗಿ ನುಡಿದರು.ಮುಂದಿನ ವಾರ್ಷಿಕ ಪರೀಕ್ಷೆಗೆ ಸಜ್ಜಾಗುತ್ತಿರುವ ವಿದ್ಯಾರ್ಥಿಗಳಿಗೆ ಪೆನ್ನು ಮತ್ತು ಪರೀಕ್ಷಾ ಸಾಮಗ್ರಿಗಳ ಜೊತೆಗೆ ನೀರಿನ ಬಾಟಲ್‌ನ್ನು ಕೊಡುಗೆಯಾಗಿ ನೀಡಿದರು, ಈ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ ಸದಸ್ಯ ರಸೂಲ್‌ಸಾಬ್, ಶಿಕ್ಷಕರಾದ ಶರಣಗೌಡ, ಮಹಬೂಬ್ ಸಾಬ್, ಹಲೀಮಾಬೇಗಂ, ಪೋಷಕರಾದ ಮೊ.ಉಮರ್ ಹಾಗೂ ಸಹಶಿಕ್ಷಕರು ಉಪಸ್ಥಿತರಿದ್ದರು. ನಂತರ ವಿದ್ಯಾರ್ಥಿಗಳಿಗೆ ಮತ್ತು ಅತಿಥಿಗಳಿಗೆ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

## ಫೆ. 21ರಂದು ಲಿಂಗಸೂಗೂರಿನಲ್ಲಿ ಹಳಗನ್ನಡ ಸಾಹಿತ್ಯ ಪರಂಪರೆ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ



ಧೈರ್ಯದ ದಾರಿ

**ಲಿಂಗಸುಗೂರು,ಫೆ.16–** ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಹಕಾರದೊಂದಿಗೆ ತಾಲೂಕು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ಫೆಬ್ರವರಿ 21, 2025ರಂದು ಬೆಳಿಗ್ಗೆ 10 ಗಂಟೆಗೆ ಲಿಂಗಸೂಗೂರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ "ಹಳಗನ್ನಡ ಸಾಹಿತ್ಯ ಪರಂಪರೆ" ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು ಹಾಗೂ ಶಾಸಕ ಮಾನಪ್ಪ ವಜ್ಜಲ್ ತಿಳಿಸಿದ್ದಾರೆ.

ಶನಿವಾರ ಸಂಜೆ ತಮ್ಮ ನಿವಾಸದಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಕನ್ನಡ ಭಾಷೆಯ ಶ್ರೀಮಂತಿಕೆಗೆ ಆಧಾರವಾದ ಹಳಗನ್ನಡ ಸಾಹಿತ್ಯ ಪರಂಪರೆಯನ್ನು ಸ್ಮರಿಸಿ, ಅದರ ಮೌಲ್ಯಗಳನ್ನು ಹೊಸ ತಲೆಮಾರಿಗೆ ಪರಿಚಯಿಸುವ ಉದ್ದೇಶದಿಂದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಹಳಗನ್ನಡದ ಮಹತ್ವದ ಕೃತಿಗಳಾದ 'ವಡ್ಡಾರಾಧನೆ' ಕಥೆಗಳು, 'ಕವಿರಾಜಮಾರ್ಗ', 'ಶಬ್ದಮಣಿದರ್ಪಣ', ಜನ್ನನ 'ಯಶೋಧರ ಚರಿತೆ', 'ಪಂಪಭಾರತ', 'ಕುಮಾರವ್ಯಾಸ ಭಾರತ' ಸೇರಿದಂತೆ ವಿವಿಧ ಮೌಲಿಕ ವಿಷಯಗಳ ಕುರಿತು ನಾಡಿನ ಖ್ಯಾತ ವಿದ್ವಾಂಸರು ವಿಶೇಷ ಉಪನ್ಯಾಸಗಳನ್ನು ನೀಡಲಿದ್ದಾರೆ ಎಂದು ತಿಳಿಸಿದರು.

ತಾಲೂಕಿನ ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು, ಕನ್ನಡ ಅಧ್ಯಾಪಕರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಚುಟುಕು ಸಾಹಿತ್ಯ ಪರಿಷತ್ ಗೌರವಾಧ್ಯಕ್ಷ ಡಾ. ಕೆ. ಶಶಿಕಾಂತ, ತಾಲೂಕು ಅಧ್ಯಕ್ಷ ದುರ್ಗಾಸಿಂಗ್, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಅನಂತದಾಸ, ಪದಾಧಿಕಾರಿಗಳಾದ ಅನಿಲಕುಮಾರ ಮಿಶ್ರಾ, ನಿರುಪಾದಿ ಖೈರವಾಡಗಿ, ಪ್ರಾಧ್ಯಾಪಕ ಭೀಮಸಿಂಗ್ ನಾಯ್ಕ್, ಶರಬಣ್ಣ ಹಾಗೂ ಕಲ್ಲೂರು ಮೂಕಾಂಬಿಕೆ ದೇವಸ್ಥಾನದ ಪ್ರಧಾನ ಅರ್ಚಕರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಮಾನ್ವಿ ಪಬ್ಲಿಕ್ ಶಾಲೆಗೆ 11 ನೇ ವಾರ್ಷಿಕೋತ್ಸವದ ಸಂಭ್ರಮ



ಧೈರ್ಯದ ದಾರಿ

**ಮಾನ್ವಿ,ಫೆ.16–** ವಿದ್ಯಾರ್ಥಿಗಳು ಶಿಕ್ಷಕರ ಮಾತುಗಳನ್ನು ಕೇಳಿ, ವಿದ್ಯಾಭ್ಯಾಸದಲ್ಲಿ ಶ್ರದ್ಧೆಯಿಂದ ತೊಡಗಿಸಿಕೊಳ್ಳಬೇಕು ಸಮಾಜಕ್ಕೆ ಉತ್ತಮ ನಾಗರಿಕರಾಗಬೇಕು ಅಲ್ಲದೆ ಸಾಮರಸ್ಯದಿಂದ ಕೆಲಸ ಕಾರ್ಯಗಳಲ್ಲಿ ತೊಡಗಿಸಿ ಕೊಳ್ಳಬೇಕು ಎಂದು ಮಹಾರಾಷ್ಟ್ರದ ಧರ್ಮ ಗುರುಗಳಾದ ಸೈಯದ್ ಹೈದರ್ ಪಾಷಾ ಖಾದ್ರಿ ಸಾಹೇಬ್ ಸಜ್ಜಾದ್ ಎ ನಶಿನ್ ನೀಲಂಗ ಶರೀಫ್ ಇವರು ನುಡಿದರು. ಅವರು ನಗರದ ಮಾನ್ವಿ ಪಬ್ಲಿಕ್ ಶಾಲೆಯ ಹನ್ನೊಂದನೇ ವಾರ್ಷಿಕೋತ್ಸವದ ಸಂಭ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ನಜಿರುದ್ದೀನ್ ಖಾದ್ರಿ ಮಾಜಿ ಪುರಸಭಾ ಅಧ್ಯಕ್ಷರು, ಸೈಯದ್ ಸಜ್ಜಾದ ಹುಸೇನಿ ಮತವಾಲೆ, ಸೈಯದ್ ಖಾಲಿದ್ ಖಾದ್ರಿ ಹಿರಿಯ ಕಾಂಗ್ರೆಸ್ ಮುಖಂಡರು, ಮಾನ್ವಿ ತಾಲೂಕ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ರಾಜ ಸುಭಾಷ್ ಚಂದ್ರ ನಾಯಕ್, ಪ್ರಧಾನ ಕಾರ್ಯದರ್ಶಿ ರಾಜು ತಾಳಿಕೋಟೆ,ಒಕ್ಕೂಟದ ಉಪಾಧ್ಯಕ್ಷ ಎಂ. ಎಚ್.ಮುಖೀಮ್,ಮಾತವಲೇ ಶಾಲೆಯ ಬಾಬಾ ಮತ್ವಾಲೆ, ಅಲ್ಫಾಖಾನ್ ಶಾಲೆಯ ಹರೂನ್,ಡಾಫೋದಿಲ್ಸ್ ಶಾಲೆಯ ಅಲೀಮ್ ಖಾನ್, ಸರ್ವೋದಯ ಸಂಸ್ಥೆಯ ಆಂಜನೇಯ, ಬೀ ವಿ ಆರ್ ಶಾಲೆಯ ಪದ್ಮಾವತಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಬಿ ಬಲರಾಮಕೃಷ್ಣ ವಕೀಲರು, ಕಾರ್ಯದರ್ಶಿ ಎಂ ರಾಮಲಿಂಗಪ್ಪ, ರಾಯಚೂರು ಜಿಲ್ಲಾ ಸ್ಕೌಟ್ ಗೈಡ್ ಸಂಘಟಕ ಅಂಬಣ್ಣ ನಾಯಕ್ ಮ್ಯಾಕಲ್, ಅರುಣ್ ಚಂದ ಅಧ್ಯಕ್ಷರು ತಾಲೂಕ ವೀರಶೈವ ಸಮಾಜ, ರೇವಣಸಿದ್ದಯ್ಯ ಪುರಸಭಾ ಸದಸ್ಯರು, ಚಾಂದ್ ಪಾಷಾ ಗುತ್ತೇದಾರರು, ಅರವಿಂದ ದೇಸಾಯಿ ವಕೀಲರು,, ಸೈಯದ್ ಅಕ್ಬರ್ ಪಾಶಾ ಹುಸೇನಿ ಅಧ್ಯಕ್ಷರು ದಾರು ಸಲಾಂ ಬ್ಯಾಂಕ್ ಮಾನ್ವಿ ಸೈಯದ್ ಮೀನಾಜ್ ಉಲ್ಲ ಹಸನ್ ಪ್ರಾಧ್ಯಾಪಕರು,ಶಾಲಾ ಕಾರ್ಯದರ್ಶಿ ಸೈಯದ್ ಮುಜಾತ ಬಾ ಖಾದ್ರಿ , ಮುಖ್ಯ ಗುರು ನಾಗರತ್ನ ದೇಸಾಯಿ ಸೇರಿದಂತೆ ಅನೇಕ ಗಣ್ಯರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಶಾಲಾ ವಿದ್ಯಾರ್ಥಿಗಳಿಂದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು. ಕಾರ್ಯಕ್ರಮದ ಸಂದರ್ಭದಲ್ಲಿ ಸ್ಕೌಟ್ ಗೈಡ್ ವಿದ್ಯಾರ್ಥಿಗಳ ಸೇವೆ, ಅತಿಥಿಗಳ ಸ್ವಾಗತ ನೆರೆದ ಪಾಲಕರನ್ನು ಹಾಗೂ ಗಣ್ಯರನ್ನು ಆಕರ್ಷಿಸಿ ತು. ಶಾಲಾ ಶಿಕ್ಷಕರಿಗೆ ಅವರ ನಿಸ್ವಾರ್ಥ ಸೇವೆಗಾಗಿ ಪ್ರಸಂಶ ಪತ್ರವನ್ನು ನೀಡಿ ಗೌರವಿಸಲಾಯಿತು.

# ದಂಡಗುಂಡ ಬಸವಣ್ಣ ದೇವಸ್ಥಾನದ ಜೀರ್ಣೋದ್ಧಾರ ; ಸಂಕನೂರ



**ಚಿತ್ತಾಪುರ;ಫೆ.16:** ತಾಲೂಕಿನ ದಂಡಗುಂಡ ಗ್ರಾಮದ ಹಳೆಯ ಬಸವಣ್ಣ ದೇವಸ್ಥಾನವನ್ನು ತೆರವುಗೊಳಿಸಿ ಆ ಸ್ಥಳದಲ್ಲಿ ಕಳೆದ ಎರಡು ವರ್ಷಗಳಿಂದ ಬಸವನ ಭಾಗೇವಾಡಿಯ ಬಸವೇಶ್ವರ ದೇವಸ್ಥಾನದ ಮಾದರಿಯಲ್ಲಿ ನೂತನ ಕಟ್ಟಡವನ್ನು ಭಕ್ತರ ಇಷ್ಟಾರ್ಥದಂತೆ ಜೀರ್ಣೋದ್ಧಾರ ಮಾಡಲಾಗುತ್ತಿದೆ ಎಂದು ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಭಾಗಣ್ಣಗೌಡ ಸಂಕನೂರ ಹೇಳಿದರು.
ತಾಲೂಕಿನ ದಂಡಗುಂಡ ಗ್ರಾಮದ ದೇವಸ್ಥಾನದ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಲಬುರಗಿಯ ವಾಸ್ತುಶಿಲ್ಪಿ ಬಸವರಾಜ ಖಂಡೇರಾವ ಅವರು ತಯಾರಿಸಿದ 10 ಕೋಟಿ ವೆಚ್ಚದ ನೀಲಿ ನಕ್ಷೆಯಡಿಯಲ್ಲಿ ಭಕ್ತರು ನೀಡಿರುವ ಸ್ವಯಂ ಪ್ರೇರಿತ ದೇಣಿಗೆಯಿಂದ ನೂತನ ದೇವಸ್ಥಾನ ನಿರ್ಮಾಣ ಕಾಮಗಾರಿ ನಡೆದಿದ್ದು, ಇದುವರೆಗೂ ಸರ್ಕಾರದಿಂದ ಯಾವುದೇ ರೀತಿಯ ಅನುದಾನವನ್ನು ಪಡೆಯದೇ ಭಕ್ತರು ನೀಡಿದ ಹಣದಲ್ಲಿ ಸುಮಾರು 4 ಕೋಟಿ ವೆಚ್ಚದಲ್ಲಿ ಶೇ.30 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಮುಂದಿನ ಕಾಮಗಾರಿಗೆ ಹಣದ ಹೊಂದಾಣಿಕೆಗೆ ಟ್ರಸ್ಟ್ ಹಾಗೂ ಗ್ರಾಮಸ್ಥರು ಕೂಡಿಕೊಂಡು ಗ್ರಾಮಗಳಿಗೆ ತೆರಳಿ ಭಕ್ತರಿಂದ ದೇಣಿಗೆ ಸಂಗ್ರಹಿಸಲು ಭಕ್ತರಿಂದ ಒತ್ತಡ ಬರುತ್ತಿದ್ದು, ಅದರಂತೆ ಟ್ರಸ್ಟ್ ಕಾರ್ಯೋನ್ಮುಖವಾಗಿದೆ. ಅವರ ಸಹಕಾರದಿಂದ ಬರುವ ಶ್ರಾವಣಮಾಸದಲ್ಲಿ ನಡೆಯುವ ಜಾತ್ರೆಯವರೆಗೂ ದೇವಸ್ಥಾನ ಕಾಮಗಾರಿ ಪೂರ್ಣಗೊಳಿಸಿ ಭಕ್ತರಿಗೆ ಅನುಕೂಲ ಮಾಡಿಕೊಡುವ ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.
ದೇವಸ್ಥಾನಕ್ಕಾಗಿ ವಿಧಾನ ಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಹಾಗೂ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 50 ಲಕ್ಷ ರೂ. ನೀಡುವ ಭರವಸೆ ನೀಡಿದ್ದಾರೆ. ಈಗಾಗಲೇ 9 ಜನ ಭಕ್ತರು ಯಾತ್ರಾರ್ಥಿಗಳಿಗೆ 9 ಕೊಣೆಗಳನ್ನು ನಿರ್ಮಿಸಿದ್ದಾರೆ ಇನ್ನು ಹಲವಾರು ಭಕ್ತರು ಕೋಣಿ ನಿರ್ಮಿಸಲು ಮುಂದೆ ಬಂದಿದ್ದಾರೆ ಎಂದರು.
ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಚಂದ್ರಶೇಖರ ಅವಂಟಿ ಮಾತನಾಡಿ, ಸುಮಾರು ವರ್ಷಗಳಿಂದ ಜೀರ್ಣೋದ್ಧಾರ ಕಾರ್ಯವನ್ನು ನಮ್ಮ ಟ್ರಸ್ಟ್ ಮಾಡುತ್ತಿದೆ, ಇದಕ್ಕೆ ಕೆಲವರು ತುಂಬಾ ತೊಂದರೆ ನೀಡಿದ್ದರು, ಇವರ ಕುತಂತ್ರಕ್ಕೆ ಭಕ್ತರು ಅವಕಾಶ ನೀಡದೇ ಇರುವುದರಿಂದ ದೇವಸ್ಥಾನದ ಚಿತ್ರಣವನ್ನು ಬದಲಾಯಿಸಲು ಸಾಧ್ಯವಾಗುತ್ತಿದೆ ಅದಕ್ಕಾಗಿ ಭಕ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಟ್ರಸ್ಟ್ ಹಿರಿಯ ಸದಸ್ಯ ಭೀಮಣ್ಣ ಸಾಲಿ ಮಾತನಾಡಿ, ದೇವಸ್ಥಾನದಲ್ಲಿ ಈ ಬಾರಿ 80 ಕೆ.ಜಿ ಬೆಳ್ಳಿಯ ಪಲ್ಲಕ್ಕಿ, ದೇವಸ್ಥಾನದಲ್ಲಿರುವ 50 ರಿಂದ 60 ತೊಲೆ ಬಂಗಾರದಲ್ಲಿ ದೇವರ ಮೂರ್ತಿ ಮತ್ತು ಭಕ್ತರು ನೀಡಿದ ಬೆಳ್ಳಿ ದೇಣಿಗೆಯಿಂದ ದೇವಸ್ಥಾನದ ಕಮಾನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.
ದೇವಸ್ಥಾನಕ್ಕೆ ಹಿಂದಿನ ಕಾಲದಿಂದಲೂ ಭಕ್ತರು ತಮ್ಮ ಹರಕೆಯನ್ನು ತೀರಿಸಲು ಹೋರಿಗಳನ್ನು ದೇಣಿಗೆ ನೀಡುತ್ತಾ ಬರುತ್ತಾರೆ. ಆದರೆ ಅವುಗಳ ನಿರ್ವಹಣೆ ತುಂಬಾ ಕಷ್ಟವಾಗುತ್ತಿದ್ದು ಮುಂದಿನ ದಿನಗಳಲ್ಲಿ ಭಕ್ತರು ಹೋರಿಗಳನ್ನು ದೇಣಿಗೆ ನೀಡದೇ ಹಣವನ್ನು ದೇಣಿಗೆಯಾಗಿ ನೀಡಿದಲ್ಲಿ ಈಗಿರುವ ಹೋರಿಗಳನ್ನು ನಿರ್ವಹಣೆಗೆ ತುಂಬಾ ಅನುಕೂಲವಾಗುತ್ತದೆ ಎಂದು ಮನವಿ ಮಾಡಿದರು.
ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಟ್ರಸ್ಟ್ ನ ಮಹಾಂತಗೌಡ ಪಾಟೀಲ್, ರಾಜಶೇಖರ ಗೌಡ ಇದ್ದರು.

# ಯುವಕವಿಗಳು ಜನಸಾಮಾನ್ಯರ ಬದುಕಿಗೆ ಧ್ವನಿಯಾಗಬೇಕು




**ಹಂಪಿ(ವಿರೂಪಾಕ್ಷೇಶ್ವರ ವೇದಿಕೆ):ಫೆ.16:** ನವಕಾಲದ ಯುವ ಕವಿಗಳು ಜನಸಾಮಾನ್ಯರ ಬದುಕು ಬವಣೆಗಳಿಗೆ ಧ್ವನಿಯಾಗಬೇಕು. ಸಾಹಿತ್ಯ ಪರಂಪರೆಯಲ್ಲಿ ದಾಖಲಾಗದ ಬೀದಿಯಲ್ಲಿರುವ ಕೂಲಿ ಕಾರ್ಮಿಕರ ಜೀವನವನ್ನು ಕವಿತೆಗಳಲ್ಲಿ ಅಭಿವ್ಯಕ್ತಪಡಿಸಬೇಕು ಎಂದು ಹಿರಿಯ ಸಾಹಿತಿ ಎ.ಎಂ.ಮದರಿ ಯುವಕವಿಗಳಿಗೆ ಸಲಹೆ ನೀಡಿದರು.

ಹಂಪಿ ಉತ್ಸವದ ಅಂಗವಾಗಿ ವಿರೂಪಾಕ್ಷೇಶ್ವರ ವೇದಿಕೆಯಲ್ಲಿ ಭಾನುವಾರ ನಡೆದ ಯುವಕವಿಗೋಷ್ಠಿ ಉದ್ಘಾಟಿಸಿ ಎ.ಎಂ.ಮದರಿ ಮಾತನಾಡಿದ ಅವರು ಕವಿತೆ ಹಾಗೂ ಕಾವ್ಯರಚನೆಗೆ ಅರ್ಥಗರ್ಭಿತವಾದ ಭಾಷೆ, ಶೈಲಿ, ಆಕೃತಿ ಬಳಹ ಮುಖ್ಯವಾದವು. ಯುವಕವಿಗಳು ಇವನ್ನು ನಿರ್ಲಕ್ಷಿಸಬಾರದು. ಹಳೆಗನ್ನಡ, ವಚನ, ತತ್ವಪದ, ಜಾನಪದ, ದಾಸವಾಣಿ ಹಾಗೂ ನವೋದಯ ಸಾಹಿತ್ಯ ಯುವ ಕವಿಗಳಿಗೆ ಕವಿತೆ ರಚಿಸಲು ದಿಕ್ಸೂಚಿಯಾಗಬೇಕು ಕವಿತೆ ಎಂಬುದು ಮನಸ್ಸಿನ ಭಾರ ಇಳಿಸಿಕೊಳ್ಳುವ ಮತ್ತು ಮಾನಸಿಕ ಸ್ವಾಸ್ಥ್ಯ ಕಾಪಾಡುವ ಮಾರ್ಗವೂ ಆಗಬೇಕು ಎಂದು ಅಭಿಪ್ರಾಯಪಟ್ಟರು.

ಇತಿಹಾಸ, ಪರಂಪರೆ ಹಾಗೂ ವರ್ತಮಾನಕ್ಕೆ ಸಂವಾದಿಯಾದ ಯುವ ಕವಿಗೋಷ್ಠಿ :

ಯುವಕವಿಗೋಷ್ಠಿಯಲ್ಲಿ 38 ಯುವ ಸಾಹಿತಿಗಳು ಸ್ವರಚಿತ ಕವನ ಹಾಗೂ ಕವಿತೆಗಳನ್ನು ವಾಚಿಸಿದರು. ಇತಿಹಾಸ, ಪರಂಪರೆ ಹಾಗೂ ವರ್ತಮಾನಕ್ಕೆ ಸಂವಾದಿಯಾದ ಕವನ ಹಾಗೂ ಕವಿತೆಗಳು ಸಹೃದಯರ ಮೆಚ್ಚುಗೆ ಗಳಿಸಿದವು. ವಿಜಯನಗರ ಸಾಮ್ರಾಜ್ಯದ ಐತಿಹ್ಯ, ಪೌರಾಣಿಕ ಚಿತ್ರಣ, ಪ್ರಸ್ತಕ ರಾಜಕೀಯ, ಧರ್ಮ ಸಂಘರ್ಷ, ತಂದೆಯ ಪ್ರೀತಿ, ಹೆಣ್ಣು ಮಗು ಹಾಗೂ ಸ್ತ್ರೀ ಸಂವದೇನೆಗಳುಳ್ಳ ಕವಿತೆಗಳನ್ನು ರಚಿಸುವ ಮೂಲಕ ಯುವ ಕವಿಗಳು ಒಟ್ಟಾರೆ ಸಮಕಾಲೀನ ಸಮಾಜದಲ್ಲಿನ ಅಂಶಗಳಿಗೆ ಕೈಗನ್ನಡಿಯಾದರು.

ಮುಗಿಲ ಹಕ್ಕಿ ಎಂಬ ಕಾವ್ಯ ನಾಮದೊಂದಿಗೆ ಯುವ ಕವಿ ಮೈಲಾರಪ್ಪ ಬೂದಿಹಾಳ ತಮ್ಮ 'ಬಟ್ಟೆ ಮತ್ತು ಧರ್ಮ' ಎನ್ನುವ ಕವಿತೆ ವಾಚಿಸಿದರು.

ಚುನಾವಣೆ ಆಮಿಷಗಳ ಬಗ್ಗೆ ಜಾಗೃತಿ: ಬರಹಗಾರ ಹಾಗೂ ವಕೀಲ ಅಯ್ಯಣ್ಣ ನಾಯಕ ಪಾಮನಕಲ್ಲೂರು ಚುನಾವಣೆಯಲ್ಲಿ ಹೆಂಡ, ಸೀರೆ, ಹಣ ಹಂಚಿ ಮತದಾರರಿಗೆ ಆಮಿಷ ವಡ್ಡುವ ಮೂಲಕ ಮತ ಪಡೆಯುವ ರಾಜಕಾರಣಿಗಳ ಬಗ್ಗೆ 'ಚುನಾವಣೆ ಬಂತಣ್ಣಾ' ಎನ್ನುವ ಕವನ ಮೂಲಕ ಮತದಾರರು ಎಚ್ಚರಿಸಿದರು. ಮತದಾನದಲ್ಲಿ ದೇಶದ ಭವಿಷ್ಯ ಅಡಗಿದೆ. ಧನದಾಹಿ, ಭ್ರಷ್ಟ, ಕೋವುವಾದಿ ರಾಜಕಾರಣಿಗಳನ್ನು ಧಿಕ್ಕರಿಸಿ ಉತ್ತಮ ದೇಶ ಕಟ್ಟಲು ಕವನದ ಮೂಲಕ ಕರೆ ನೀಡಿದರು.

ವಿದ್ಯಾರ್ಥಿನಿ ಬಿ.ಎಂ.ಪ್ರಿಯಾಂಕ 'ಯಾರಿಗೆ ಬಂತು ಸ್ವಾತಂತ್ರ್ಯ ಎಂದು ಪ್ರಶ್ನಿಸುವ ಧ್ವನಿಯಲ್ಲಿಯೇ ತಮ್ಮ ಕವನ ವಾಚಿಸಿದಳು. ಶೇಖ ಮೊಹಮ್ಮದ್ ಜಿ 'ಇದೊಮ್ಮೆ ನಾನು ಹೆಣ್ಣಲ್ಲ ಸುಮ್ನನಿರಿ' ಎಂಬ ಕವನ ವಾಚಿಸಿ, ಡಾ.ಅನಸೂಯ ವೈ.ಟಿ ಅವರ 'ಸೂಳೆ' ಕವನ ವೇಶ್ಯಾವೃತ್ತಿಯಲ್ಲಿ ತೊಡಗಿರುವ ಮಹಿಳೆಯ ವಿವಿಧ ಮಜಲುಗಳನ್ನು ಸಹೃದಯರ ಎದುರು ತೆರೆದಿಟ್ಟಿತ್ತು. ಹಂಪಿ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿನಿ ಶ್ವೇತಾ ಬಾಳಿ 'ಬಡಿಸುವಳು ಬರಿದಾಗದಂತೆ!' ಎನ್ನುವ ಕವನ, ಸಹಜೀವನ ಪದ್ಧತಿ ಬಗ್ಗೆ ರೇಣುಕಾ ಹೆಳವರ್ ಕವನ ವಾಚಿಸಿ, ಉಳಿದಂತೆ ಇತರೆ ಯುವಕವಿಗಳು ಹಂಪಿಯ ಇತಿಹಾಸ, ನಾಡು ನುಡಿ ಹಾಗೂ ತಂದೆ-ತಾಯಿ, ಧರ್ಮ ರಾಜಕಾರಣದ ಕುರಿತಾದ ಕವನಗಳನ್ನು ವಾಚಿಸಿದರು.

ಹಂಪಿ ಕನ್ನಡ ವಿವಿ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ರವೀಂದ್ರನಾಥ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೂಡ್ಲಗಿ ತಹಶೀಲ್ದಾರ್ ನೇತ್ರಾವತಿ, ಸಾಹಿತಿ ಡಾ.ಚನ್ನಬಸಪ್ಪ ಚಿಲ್ಕರಾಗಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೋರೇಗೌಡ, ಉಪನ್ಯಾಸಕ ಎಂ. ಆರ್.ವಾಗೀಶ, ಕನ್ನಡ ಸಾಹಿತ್ಯ ಪರಿಷತ್ ನಿಶ್ಚಿ ರುದ್ರಪ್ಪ ಸೇರಿದಂತೆ ಸಾಹಿತಿಗಳು ಇತರರು ಪಾಲ್ಗೊಂಡಿದ್ದರು.

# ವಿಜಯನಗರ ಕಲಾಸಿರಿವಂತಿಗೆ ಸಾಕ್ಷಿಯಾದ ಜಾನಪದ ವಾಹಿನಿ ಅನಾವರ್ಣಗೊಂಡ ಕರ್ನಾಟಕದ ಸಾಂಸ್ಕೃತಿಕ ವೈಭವ

**ಹಂಪಿ(ಹೊಸಪೇಟೆ)ಫೆ16:** ಐತಿಹಾಸಿಕ ಹಂಪಿ ಉತ್ಸವದ ಮೂರನೇ ದಿನವಾದ ಭಾನುವಾರ ಗೋದೂಳಿಹೊತ್ತಿನಲ್ಲಿ ಜಾನಪದ ವಾಹಿನಿ ಮೆರವಣಿಗೆಯು ವರ್ಣರಂಜಿತವಾಗಿ ನಡೆಯಿತು.

ಹಂಪಿಯ ಶ್ರೀ ಉದ್ದಾನ ವೀರಭದ್ರೇಶ್ವರ ದೇವಸ್ಥಾನದ ಬಳಿಯಲ್ಲಿ ಮೆರವಣಿಗೆಗೆ ಶಾಸಕ ಹೆಚ್.ಆರ್.ಗವಿಯಪ್ಪ ಅವರು ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆಗೈದು ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿದರು.

ಮುಂದೆ ರಾಜಗಾಂಭೀರ್ಯದಿಂದ ಲಕ್ಷ್ಮೀ ಆನೆಯು ಹೆಜ್ಜೆ ಹಾಕುತ್ತಿದ್ದರೆ ಹಿಂದೆ ಭುವನೇಶ್ವರಿ ದೇವಿ ಇದ್ದ ರಥ ಸಾಗುವ ಮೂಲಕ ಜಾನಪದ ವಾಹಿನಿಗೆ ಚಾಲನೆ ದೊರೆಯಿತು. ಕಣ್ಣು ಹಾಯಿಸಿದ ಕಡೆಯೆಲ್ಲಾ ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕ ಫೋಟೋ ಮತ್ತು ವಿಡಿಯೋ ಚಿತ್ರೀಕರಣ ಮಾಡುವ ಮೂಲಕ ಸಂಭ್ರಮಿಸಿದರು.

ಮೆರವಣಿಗೆ ನಡೆಯುವ ರಾಜಬೀದಿಯುದ್ದಕ್ಕೂ ಎಲ್ಲೆಲ್ಲೂ ಮೊಳಗಿದ ಕಲಾ ತಂಡಗಳ ವೈಭವ ಸಾಂಪ್ರದಾಯಿಕ ವಾದ್ಯಗಳ ನಾದವೂ ಮಾರ್ಗದುದ್ದಕ್ಕೂ ಪ್ರತಿಧ್ವನಿಸಿತು. ಕಣ್ಣಿಗೆ ಮೊದನೀಡುವ ವೇಷ ಭೂಷಣ ತೊಟ್ಟ ಕಲಾ ತಂಡಗಳ ನೃತ್ಯ. ಸಂಭ್ರಮಿಸುತ್ತಿರುವ ಕಲಾ ಪ್ರೇಮಿಗಳು. ಮೆರವಣಿಗೆಯು ಉತ್ಸವಕ್ಕೆ ಆಗಮಿಸಿದ್ದ ಜನತೆಯ ಆಕರ್ಷಣೆಗೆ ಕಾರಣವಾಯಿತು. ವಿದೇಶಿ ಪ್ರವಾಸಿಗರು ಸಹ ಜಾನಪದ ಕಲೆಗಳಿಗೆ ಮನಸೋತು ಫೋಟೋ ಕ್ಲಿಕ್ಕಿಸುವ ಮೂಲಕ ಸಂಭ್ರಮದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತು.

ಜಾನಪದ ವಾಹಿನಿಯಲ್ಲಿ ಡೊಳ್ಳು ಕುಣಿತ, ನಾದಸ್ವರ, ಕಹಳೆ ವಾದ್ಯ, ಸಮಾಳ, ನಂದಿಧ್ವಜ, ಮಂಗಳವಾದ್ಯ, ಜೆಂಡೆವಾದ್ಯ,



ಸಿಂಗಾರಿ ಮೇಳ, ಕಂಸಾಳೆ, ಸುಡಗಾಡು ಕೈಚಳಕ ಚಮತ್ಕಾರ, ಸಂಸ್ಕೃತಿ ಜನಪದ ಕಲೆ, ಚಿಲಿಪಿಲಿಬೊಂಬೆ, ಹಲಗೆ ವಾದನ, ತಮಟೆ ವಾದನ, ಸೋಮನ ಕುಣಿತ, ಸಮಾಳ ಮತ್ತು ನಂದಿಕೋಲು, ಗಾರುಡಿ ಗೊಂಬೆ, ಕೋಲಾಟ, ನಗಾರಿ, ಹಂಪಾ ಪಟ್ಟಣ ಸುಡಗಾಡು, ಕೈಚಳಕ ಚಮತ್ಕಾರ, ಸಂಸ್ಕೃತಿ ಜಾನಪದ ಕಲೆ, ಮೋಹಿನಿ ಭಸ್ಮಾಸುರ ರೂಪಕ, ಹಗಲು ವೇಷ, ಕೀಲು ಕುದುರೆ, ಪೂಜಾ ಕುಣಿತ, ನಂದಿಧ್ವಜ ಮತ್ತು ಸಂಬಾಳ, ಹಲಗೆ ವಾದನ, ವೀರಗಾಸೆ, ಗೋಂಬೆಕುಣಿತ, ಚಿಲಿಪಿಲಿ ಗೊಂಬೆ, ವೀರಗಾಸೆ ಕಲಾ ಪ್ರಕಾರಗಳು ಮೆರವಣಿಗೆಗೆ ಮೆರಗು ನೀಡಿದವು.

ಹಂಪಿಯ ಉದ್ದಾನ ವೀರಭದ್ರೇಶ್ವರ ದೇವಸ್ಥಾನದಿಂದ ಆರಂಭವಾದ ಜಾನಪದ ವಾಹಿನಿ ಮೆರವಣಿಗೆಯು ಹಂಪಿಯ ಬಜಾರ್ ಮೂಲಕ ವಿರೂಪಾಕ್ಷೇಶ್ವರ ದೇವಸ್ಥಾನದವರೆಗೆ ವೈಭವದಿಂದ ಜರುಗಿತು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಸಂತ ಸೇವಾಲಾಲರ ಆದರ್ಶ ತತ್ವಗಳಿಂದ ಬಂಜಾರ ಸಮಾಜ ಪರಿವರ್ತನೆಯಾಗಿದೆ: ಸಚಿವ ಶಿವಾನಂದ್ ಪಾಟೀಲ್



**ಬಸವನ ಬಾಗೇವಾಡಿ :ಫೆ.16:**ಸಂತ ಸೇವಾಲಾಲರ ಆದರ್ಶ ತತ್ವಗಳಿಂದ ಬಂಜಾರ ಸಮಾಜ ಪರಿವರ್ತನೆಯಾಗಿದೆ ಭಾರತ ದೇಶದಲ್ಲಿ ನೂರಾರು ಭಾಷೆ ಸಾವಿರಾರು ಜಾತಿಗಳಿದ್ದರೂ ಅನೇಕ ಮಹಾತ್ಮರು ಶರಣರು ಸಂತರು ಜನಿಸಿದ ಕಾರಣದಿಂದ ಸಮಾಜ ಸಾಮರಸ್ಯದಿಂದ ಜೀವನವನ್ನು ಸಾಗಿಸುತ್ತವೆ ಸಂತ ಸೇವಾಲಾದರೂ ಬಂಜಾರ ಸಮಾಜದಲ್ಲಿ ಜನಿಸಿದ್ದರಿಂದ ಅವರ ತತ್ವ ಆದರ್ಶಗಳಿಂದ ಬಂಜಾರ ಸಮಾಜ ಬದಲಾವಣೆಯಾಗಿದೆ ಎಂದು ಸಕ್ಕರೆ ಜವಳಿ ಕಬ್ಬು ಅಭಿವೃದ್ಧಿ ಕೃಷಿ ಮಾರುಕಟ್ಟೆ ಸಚಿವರಾದ ಶ್ರೀ ಶಿವಾನಂದ್ ಪಾಟೀಲ್ ಮಾತನಾಡಿದರು ಪಟ್ಟಣದ ಬಸವ ಭವನದಲ್ಲಿ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘಟನೆಯಿಂದ ಸಂತ ಸೇವಾಲಾದರೆ 287 ನೆಯ ಜಯಂತಿ ಉತ್ಸವ ಅಂಗವಾಗಿ ಭಾನುವಾರ ಹಮ್ಮಿಕೊಂಡ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು ನನಗೆ ಬಹಳ ಸಂತೋಷದ ವಿಷಯ ಎಂದರೆ ಬಂಜಾರ ಸಮಾಜದ ಸಮುದಾಯ ಕಷ್ಟಪಟ್ಟ ದುಡಿದು ಇಷ್ಟಪಟ್ಟುವ ಊಟ ಮಾಡುವ ಜನಾಂಗ ಎಲ್ಲೇ ಹೋದರು ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಈ ಬಂಜಾರ ಸಮುದಾಯ ನಮಗೆ ಸಿಗುತ್ತಾರೆ ಎಲ್ಲಾ ಸಮುದಾಯದವರಿಗು ಸಮುದಾಯ ಭವನವನ್ನು ಕಟ್ಟಿಸಲಾಗಿದೆ ಬಂಜಾರ ಸಮುದಾಯದ ಬಾಳ ದಿನದ ಬೇಡಿಕೆ ಸಮುದಾಯ ಭವನ ಅವರಿಗೂ ಸಹ ಸಮುದಾಯ ಭವನವನ್ನು ಶೀಘ್ರದಲ್ಲಿ ಕಟ್ಟಿಸಲಾಗುವುದೆಂದರು, ಕರ್ನಾಟಕ ರಾಜ್ಯ ಕೌಶಲ್ಯ ಅಭಿವೃದ್ಧಿಯ ಅಧ್ಯಕ್ಷರಾದ ಶ್ರೀಮತಿ ಕಾಂತ ನಾಯಕ್ ಮಾತನಾಡಿ ಸಂತ ಸೇವಾಲಾಲರು ನಮ್ಮ ಸಮಾಜದಲ್ಲಿ ಜನಿಸಿದರು ಅವರು ಬೋಧಿಸಿದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ನಮ್ಮ ಸಮುದಾಯ ದುಷ್ಟ ಚಟಗಳಿಗೆ ಬಲಿಯಾಗಬಾರದು ಸೇವಾಲಾದರೆ ಜಯಂತಿಯನ್ನು ಆಚರಿಸಿದರು ಸಾಲದು ಅವರ ಬೋಧಿಸಿದ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಜೀವನವನ್ನು ಸಾಗಿಸಬೇಕು ಸರ್ಕಾರ ಬಂಜಾರ ಸಮುದಾಯಗಳಿಗೆ ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ ಅವುಗಳ ಸದುಪಯೋಗಗಳನ್ನು ಸಮುದಾಯ ಪಡೆದುಕೊಳ್ಳಬೇಕು ಯುವಕ ಯುವತಿಯರಿಗೆ ಕೌಶಲ್ಯ ಅಭಿವೃದ್ಧಿಯ ತರಬೇತಿಗಳನ್ನು ಸರಕಾರ ಆಯೋಜಿಸಿದೆ ಅದರ ಉಪಯೋಗವನ್ನು ಪಡೆದುಕೊಂಡು ಯುವಕ ಯುವತಿಯರು ಕಂಪನಿಗಳಲ್ಲಿ ಕೆಲಸ ಪಡೆಯಬಹುದು ತಮಗೆ ತಿಳಿಯದಿದ್ದರೆ ಯಾವುದೇ ಸಮಯದಲ್ಲಿ ನನಗೆ ಫೋನ್ ಮೂಲಕ ಸಂಪರ್ಕಿಸಬಹುದು ಎಂದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕರ್ನಾಟಕ ಪ್ರದೇಶ ಬಂಜಾರ ಸೇವಾ ಸಂಘದ ಜಿಲ್ಲಾಧ್ಯಕ್ಷರಾದ ಬಸವರಾಜ್ ಚೌಹಾಣ್ ಮಾತನಾಡಿ ಒಳ ಮೀಸಲಾತಿಯಿಂದ ನಮ್ಮ ಸಮುದಾಯಕ್ಕೆ ಅನ್ಯಾಯವಾಗುತ್ತದೆ ಕಾರಣ ಸರಕಾರ ಕೂಡಲೇ ಒಳ ಮೀಸಲಾತಿ ರದ್ದುಪಡಿಸಬೇಕು ಮಾನ್ಯ ಸಚಿವರಾದ ಶಿವಾನಂದ್ ಪಾಟೀಲ್ ಅವರು ನಮಗೆ ನ್ಯಾಯ ಒದಗಿಸುವ ಭರವಸೆವಿದೆ ರೋಸ್ಟರ್ ಪದ್ಧತಿಯನ್ನು ಸರಕಾರ ಮುಂದುವರಿಸಬೇಕು ಎಂದರು ಪ್ರಾಸ್ತವಿಕವಾಗಿ ನ್ಯಾಯವಾದಿ ರವಿ ಎಂ ರಾಠೋಡ್ ಮಾತನಾಡಿ ನಮ್ಮ ಸಮುದಾಯದ ಜನರು ಒಗ್ಗಟ್ಟಿನಿಂದ ಇರಬೇಕು ಯಾವುದೇ ರಾಜಕೀಯ ಮಾಡಲಿ ಸಮಾಜದ ವಿಷಯ ಬಂದಾಗ ಎಲ್ಲರೂ ಒಂದಾಗಬೇಕು ಈ ಕಾರ್ಯಕ್ರಮ ಮಾಡಲು ಅನೇಕರು ವಿರೋಧ ವ್ಯಕ್ತಪಡಿಸಿದರು ನಾವು ಅಧ್ಯಕ್ಷರು ಅನೇಕ ಜನ ಯುವಕರು ಅದಕ್ಕೆ ಹೆದರದೆ ಯಾರು ಕಡೆನೋ ಹಣವನ್ನು ಕೇಳದೆ ನಾವೇ ಪದಾಧಿಕಾರಿಗಳು ಹಣವನ್ನು ಸಂಗ್ರಹಿಸಿ ಈ ಕಾರ್ಯಕ್ರಮವನ್ನು ಎಲ್ಲರ ಸಹಕಾರದಿಂದ ಅದ್ಭುತವಾಗಿ ಆಚರಿಸಲಾಯಿತು ಎಂದರು ಈ ಕಾರ್ಯಕ್ರಮದ ಸಾನಿಧ್ಯ ವಹಿಸಿದ ಕೆಸರಟ್ಟಿ ಸೋಮಲಿಂಗ ಮಹಾರಾಜರು ಮಾತನಾಡಿ ನಮ್ಮ ಸಮುದಾಯ ಒಂದಾಗಬೇಕು ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ರಾಜಕೀಯ ನಾಯಕರಿಗೆ ತೋರಿಸಬೇಕಾಗಿದೆ ಈಗ ಸರಕಾರ ಒಳಮಿಸಲಾತಿಯನ್ನು ಜಾರಿಗೆ ತರುವ ಮೂಲಕ ನಮಗೆ ಅನ್ಯಾಯವಾಗಿದೆ ಅದರ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ಮಾಡಬೇಕಾಗಿದೆ ಕೂಡಲೇ ಸರ್ಕಾರದಲ್ಲಿ ರದ್ದುಪಡಿಸಬೇಕು ನಮ್ಮ ಸಮುದಾಯದ ಜನರು ದುಶ್ಚಟಗಳಿಗೆ ಬಲಿಯಾಗಬಾರದು ಎಲ್ಲರೂ ಶಿಕ್ಷಣವಂತರಾಗಬೇಕು ಅಂದಾಗ ಮಾತ್ರ ನಮ್ಮ ಸಮುದಾಯ ಮುಂದುವರೆಲು ಸಾಧ್ಯವಾಗುತ್ತದೆ ಎಂದರು ಈ ಕಾರ್ಯಕ್ರಮದ ನೇತೃತ್ವ ವಹಿಸಿದ ಶ್ರೀಕಾಂತ ಮಹಾರಾಜರು ನರಸಲಗಿ ಅವರು ಮಾತನಾಡಿ ನಮ್ಮ ಜನಾಂಗ ಅಜ್ಞಾನದಿಂದ ಸುಜ್ಞಾನ ಕಡೆಗೆ ಬರಬೇಕು ಶಿಕ್ಷಣವಂತರಾಗಬೇಕು ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ ಮೊಬೈಲ್ ಹಾಳಾದರೆ ರಿಪೇರಿ ಮಾಡಿಸಬಹುದು ಆದರೆ ಮಕ್ಕಳ ಹಾಳಾದರೆ ಏನು ಮಾಡಲು ಸಾಧ್ಯವಾಗುವುದಿಲ್ಲ ಕಾರಣ ತಾಯಂದಿರು ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ ಕೆಪಿಸಿಸಿಯ ರಾಜ್ಯ ಸಂಯೋಜಕರಾದ ಪ್ರಭುಗೌಡ ಪಾಟೀಲ್ ಲಿಂಗದಳ್ಳಿ ದೇವರೇ ಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ್ ಪಿ ಎಲ್ ಡಿ ಬ್ಯಾಂಕಿನ ಅಧ್ಯಕ್ಷರಾದ ಈರಣ್ಣ ಪಟ್ಟಣಶೆಟ್ಟಿ ಮಾತನಾಡಿದರು.
ಕಾರ್ಯಕ್ರಮಕ್ಕೆ ಮುನ್ನ ಸಂತ ಸೇವಾಲಾಲರ ಭಾವಚಿತ್ರದ ಮೆರವಣಿಗೆಯನ್ನು ಪಟ್ಟಣದಲ್ಲಿ ಬೈಕ ರ್ಯಾಲಿ ಮೂಲಕ ಮೆರವಣಿಗೆ ನಡೆಯಿತು ವೇದಿಕೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್ ಹಾರಿವಾಳ ಜೆಡಿಎಸ್ ರಾಜ್ಯ ಉಪಾಧ್ಯಕ್ಷರಾದ ಅಪ್ಪುಗೌಡ ಪಾಟೀಲ್ ಅನಿಲ್ ಅಗರ್ವಾಲ್ ಬಸವರಾಜ ಲಮಾಣಿ ಹರಿಲಾಲ್ ನಾಯ್ಕ ಶ್ರೀಮತಿ ರುಕ್ಮಿಣಿ ರಾಠೋಡ್ ಸುನಿತಾ ಪವಾರ ಮಲ್ಲು ಪವಾರ್ ನೇಮು ನಾಯಕ ಪ್ರಶಾಂತ್ ಪವಾರ ತಸಿಲ್ದಾರ್ ಶ್ರೀ ವೈ ಎಸ್ ಸೋಮನಕಟ್ಟಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ವಸಂತ ರಾಥೋಡ್ ತಾಲೂಕ ಪಂಚಾಯಿತಿ ಅಧಿಕಾರಿ ಪ್ರಕಾಶ್ ದೇಸಾಯಿ ರಾಜು ರಾಥೋಡ್ ಸ್ವಾಗತಿಸಿದರು ಶ್ರೀಮತಿ ಗಿರಿಜಾ ಪಾಟೀಲ್ ಕಾರ್ಯಕ್ರಮ ನಿರೂಪಣೆ ಮಾಡಿದರು ರವಿ ರಾಠೋಡ್ ವಂದಿಸಿದರು

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**
**6360866626**

# ಸಂತ ಶ್ರೀ ಸೇವಾಲಾಲ್ ಮಹಾರಾಜರ ನೂತನ ವೃತ್ತ ಲೋಕಾರ್ಪಣೆ



ಧೈರ್ಯದ ದಾರಿ

**ಮಾನ್ವಿ,ಫೆ.16–** ಪಟ್ಟಣದ ಮುಖ್ಯ ಹೆದ್ದಾರಿಯಲ್ಲಿನ ಮಾತಾ ಕಾಲೋನಿಯಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿ ಕಾರ್ಯಕ್ರಮ ಅಂಗವಾಗಿ ಸಂತ ಶ್ರೀ ಸೇವಾಲಾಲ್ ಮಹಾರಾಜರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸುವ ಮೂಲಕ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ನೂತನ ವೃತ್ತವನ್ನು ಲೋಕಾಪರ್ಣೆಗೊಳಿಸಿ ಆಶೀರ್ವಾಚನ ನೀಡಿ ಸಂತ ಶ್ರೀ ಸೇವಾಲಾಲ್ ಮಹಾರಾಜರು ಬಂಜಾರ ಸಮುದಾಯದ ಮಹಾನ ಸಂತರಾಗಿದ್ದಾರೆ ಅವರು ತಮ್ಮ ಭಕ್ತರಿಗೆ ಅನೇಕ ಸಂದೇಶಗಳನ್ನು ನೀಡಿದ್ದು ಅವರು ತೋರಿದ ಮಾರ್ಗದಲ್ಲಿ ಪ್ರತಿಯೊಬ್ಬರು ನಡೆಯಬೇಕಾಗಿದೆ ಎಂದು ತಿಳಿಸಿದರು.

ಮಾಜಿ ಶಾಸಕ ಬಸನಗೌಡ ಬ್ಯಾಗವಾಟ್ ಮಾತನಾಡಿ ಪಟ್ಟಣದಲ್ಲಿ ಎಲ್ಲಾ ಸಮುದಾಯಗಳವರ ಮಹಾನಿಯರ ವೃತ್ತಗಳಿದ್ದು ಇಂದು ಸಂತ ಶ್ರೀ ಸೇವಾಲಾಲ್ ಮಹಾರಾಜರ ವೃತ್ತವನ್ನು ಅನಾವರಣ ಮಾಡುವ ಮೂಲಕ ಸಂತ ಶ್ರೀ ಸೇವಾಲಾಲ್ ಮಹಾರಾಜರ ಜೀವನ ಹಾಗೂ ತತ್ವಗಳನ್ನು ತಿಳಿಯುವುದಕ್ಕೆ ಸಾಧ್ಯವಾಗಿದೆ ಬಂಜಾರ ಸಮುದಾಯ ಸವಾಜದಲ್ಲಿ ಅತ್ಯಂತ ಚಿಕ್ಕ ಸಮುದಾಯವಾಗಿದ್ದರು ಕೂಡ ಇಂದು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮುಂದುವರೆಯುವುದಕ್ಕೆ ಅಗತ್ಯ ಶ್ರಮವಹಿಸುತ್ತಿರುವುದನ್ನು ಕಾಣಬಹುದಾಗಿದೆ ತಾಲೂಕಿನ ಬಂಜಾರ ಸಮುದಾಯದವರ ವಿವಿಧ ಕಾರ್ಯಕ್ರಮಗಳಿಗೆ ಅಗತ್ಯ ವಿರುವ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ತಿಳಿಸಿದರು.

ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಿವರಾಜ ವಕೀಲರು, ಬಿ.ಕೆ, ಅಮರೇಶಪ್ಪ. ಶರಣಪ್ಪಗೌಡ ನಕ್ಕುಂದಿ, ನಾಗರಾಜ ನಾಯಕ , ಶ್ರೀರಾಮುಲು, ಗೋಪಾಲನಾಯಕ ನೀರಮಾನ್ವಿ, ತಾ.ವೀರಶೈವಲಿಂಗಾಯತ ಸಮಾಜದ ತಾ,ಅಧ್ಯಕ್ಷರಾದ ಹರಿಹರಪಾಟೀಲ್, ಅಮರೇಗೌಡ, ಆಲ್ ಇಂಡಿಯಾ ಬಂಜಾರ ಸೇವಾ ಸಂಘ ಬೆಂಗಳೂರು ರಾಜ್ಯ ಉಪಾಧ್ಯಕ್ಷರಾದ ಗೋವಿಂದರಾಜ್ ವಕೀಲರು. ರಾಜ್ಯ ಸಂಚಾಲಕರಾದ ವೌನೇಶ್ ರಾಠೋಡ್ ವಕೀಲರು, ಜಿಲ್ಲಾಧ್ಯಕ್ಷರಾದ ಅಮರೇಶ್ ರಾಠೋಡ್ , ಜಿಲ್ಲಾ ಉಪಾಧ್ಯಕ್ಷರಾದ ಯಂಕಪ್ಪ ಪೂಜಾರಿ , ಜಿಲ್ಲಾ ಜಂಟಿ ಕಾರ್ಯದರ್ಶಿ ವೆಂಕಟೇಶ್ ಜಾಧವ್ , ತಾ.ಅಧ್ಯಕ್ಷರಾದ ಗೋವಿಂದ್ ಪವಾರ್ , ಗೌರವಧ್ಯಕ್ಷರಾದ ಯಂಕಪ್ಪ ಕಾರಬಾರಿ , ಕಾರ್ಯಾಧ್ಯಕ್ಷರಾದ ಗೋವಿಂದ್ ಕಂಡಕ್ಟರ್, ಸಂಘಟನಾ ಕಾರ್ಯದರ್ಶಿ ಗೋವಿಂದ್ ಚಿನ್ನನಾಯಕ್, ತಾ. ಉಪಾಧ್ಯಕ್ಷರಾದ ಕಮಲಪ್ಪ ರಾಠೋಡ್. ಪಾಂಡುರಂಗ, ತಾ. ಜಂಟಿ ಕಾರ್ಯದರ್ಶಿ ಚಿನ್ನರೆಡ್ಡಿ ರಾಠೋಡ್, ತಾ.ಪ್ರಧಾನ ಕಾರ್ಯದರ್ಶಿ ಕೃಷ್ಣ ಚೌಹಣ್ ವಕೀಲರು, ತಾಲೂಕ ಯುವ ಘಟಕದ ಅಧ್ಯಕ್ಷರಾದ ರಮೇಶ್ ಚೌಹಣ್, ಗೌರವಧ್ಯಕ್ಷ ಶಿವಪ್ಪ ಪವಾರ್ , ಕಾರ್ಯಾಧ್ಯಕ್ಷರಾದ ಶಿವು ಸಾಮ್ರಾಟ್,ಎಲ್ ಐ ಸಿ ಅಧಿಕಾರಿ ಜಯಪ್ಪ ರಾಠೋಡ್, ಕಪಗಲ್ ಗ್ರಾ.ಪಂ. ಅಧ್ಯಕ್ಷರಾದ ಶಂಕರ್ ರಾಠೋಡ್. ಗ್ರಾ.ಪಂ ಹರವಿ ಅಧ್ಯಕ್ಷರಾದ ಕೇಮಣ್ಣ ರಾಠೋಡ್, ಕೆ ಎಸ್ ಆರ್.ಟಿ.ಸಿ ನಿವೃತ್ತ ಅಧಿಕಾರಿ ಧನಸಿಂಗ್ ಥಾರೋಡ್, ಸೇರಿದಂತೆ ಆಲ್ ಇಂಡಿಯಾ ಬಂಜಾರ ಸೇವಾ ಸಂಘ ತಾಲೂಕ ಘಟಕ ಮಾನವಿ ಹಾಗೂ ತಾಲೂಕಿನ ವಿವಿಧ ತಾಂಡಗಳ ನಾಯ್ಕ ,ಕಾರುಬಾರಿಗಳು ಹಾಗೂ ಮುಖಂಡರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಬಂಜಾರ ಸಮುದಾಯದ ಸಾಧಕರನ್ನು ,ಮುಖಂಡರನ್ನು ಸನ್ಮಾನಿಸಿ ಗೌರವಿಸಲಾಯಿತು.

# ಕಲ್ಮಠ ಗಾರಿಗೆ ಜಾತ್ರೆ ಅಂಗವಾಗಿ 21 ಜೋಡಿ ಸಾಮೂಹಿಕ ವಿವಾಹ



ಧೈರ್ಯದ ದಾರಿ


**ಮಾನ್ವಿ,ಫೆ.16–** ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ಬೃಹತ್ ಶಿವಲಿಂಗದಲ್ಲಿನ ಕೋಟಿಲಿಂಗಗಳಿಗೆ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಮಿಗಳ ನೇತೃತ್ವದಲ್ಲಿ ಅಭಿಷೇಕ ,ಬಿಲ್ವರ್ಚಾನೆ, ಮಹಾಮಂಗಳಾರತಿ, ನಡೆಯಿತು ಶಿವರಾತ್ರಿ ಅಂಗವಾಗಿ ಶಿವನಿಗೆ ಇಷ್ಟವಾದ ದ್ರಾಕ್ಷಿ,ಕರ್ಜುರ, ಕರ್ಬುಜ ಹಣ್ಣುಗಳನ್ನು ,ನೈವೆದ್ಯಾವಾಗಿ ಸಮರ್ಪಿಸಲಾಯಿತು.

ಬೃಹನ್ಮಠ ನೀಲಗಲ್ ಶ್ರೀ ಡಾ.ಪಂಚಾಕ್ಷರಿ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯಸಾನಿಧ್ಯದಲ್ಲಿ 21 ಕ್ಕೂ ಹೆಚ್ಚು ಜೊಡಿಗಳ ಸಾಮೂಹಿಕ ವಿವಾಹಗಳು ನಡೆದವು.

ಕಾರ್ಯಕ್ರಮದಲ್ಲಿ ನೀಲಗಲ್ ಬೃಹನ್ಮಠದ ಅಭಿನವ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು , ರಾಯಚೂರು ಮಂಗಳವಾರ ಪೇಟೆಯ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಸೇರಿದಂತೆ ಇನ್ನಿತರರು ಇದ್ದರು.

# ಶಿವನನ್ನೊಲಿಸಿಕೊಂಡ ಬೇಡರ ಕಣ್ಣಪ್ಪ

ಇಂದಿನ ಆಂಧ್ರಪ್ರದೇಶದ ಶ್ರೀ ಕಾಳಹಸ್ತಿಯಲ್ಲಿ. ಅಲ್ಲಿನ ದಟ್ಟಾರಣ್ಯದಲ್ಲಿ ಶಿವಲಿಂಗವೊಂದಿತ್ತು. ಅರ್ಚಕರೊಬ್ಬರು ಪ್ರತಿದಿನ ವಿಧಿವತ್ತಾಗಿ ಪೂಜೆ ಸಲ್ಲಿಸುತ್ತಿದ್ದರು . ಆ ಕಾಡಿನಲ್ಲೇ ಬೇಡರ ಗುಂಪೊಂದು ವಾಸವಾಗಿತ್ತು. ಅದರ ಮುಖ್ಯಸ್ಥನೇ ಕಣ್ಣಪ್ಪ (ತಿನ್ನ) . ಒಂದು ದಿನ ಬೇಟೆಯಾಡಲು ಬಂದ ಕಣ್ಣಪ್ಪ, ಆ ದೇವಸ್ಥಾನವನ್ನು ಪ್ರವೇಶಿಸಿದ. ಲಿಂಗವನ್ನು ನೋಡಿದ ಕೂಡಲೇ ಆತನ ಮನಸ್ಸಿನಲ್ಲಿ ಅಪಾರವಾದ ಶಿವಭಕ್ತಿ ಉಕ್ಕಿ ಹರಿಯಿತು .



ಅಂದಿನಿಂದ, ಪ್ರತಿನಿತ್ಯ ಬೇಟೆಯಾಡಿದ ಮಾಂಸವನ್ನೇ ತನ್ನ ಪ್ರೀತಿಯ ಶಿವನಿಗೆ ನೈವೇದ್ಯ ಮಾಡಲು ಆರಂಭಿಸಿದ. ಬಾಯಲ್ಲಿ ತುಂಬಿಕೊಂಡು ತಂದ ನೀರಿನಿಂದ ಅಭಿಷೇಕ ಮಾಡುತ್ತಿದ್ದ. ಆತನಿಗೆ ಪೂಜಾ ವಿಧಾನಗಳು ಗೊತ್ತಿರಲಿಲ್ಲ; ಅವನ ಬಳಿ ಇದ್ದದ್ದು ಅಪಾರ ಪ್ರೇಮ ಮಾತ್ರ . ಕಣ್ಣಪ್ಪನ ಈ ಕ್ರಮದಿಂದ ಅರ್ಚಕರಿಗೆ ತುಂಬಾ ಬೇಸರವಾಗುತ್ತಿತ್ತು. ಏಕೆಂದರೆ ಪ್ರತಿದಿನ ಬೆಳಿಗ್ಗೆ ದೇವಸ್ಥಾನಕ್ಕೆ ಬಂದಾಗ ಅಲ್ಲಿ ಮಾಂಸ, ರಕ್ತದ ಕಲೆಗಳು ಕಂಡುಬರುತ್ತಿದ್ದವು .

**ಪರೀಕ್ಷೆ ಮತ್ತು ಶಿವನ ಅನುಗ್ರಹ**–ಒಂದು ದಿನ, ಅರ್ಚಕರು ಪೂಜೆ ಸಲ್ಲಿಸುತ್ತಿರುವಾಗ ಲಿಂಗದ ಮೇಲೆ ಎರಡು ಕಣ್ಣುಗಳು ಕಾಣಿಸಿಕೊಂಡವು. ಸ್ವಲ್ಪ ಸಮಯದಲ್ಲೇ ಆ ಕಣ್ಣುಗಳಿಂದ ರಕ್ತ ಸೋರಲಾರಂಭವಾಯಿತು. ಭಯಗೊಂಡ ಅರ್ಚಕರು ಅದನ್ನು ಅಪಶಕುನವೆಂದು ಭಾವಿಸಿ ಸ್ಥಳದಿಂದ ಓಡಿಹೋದರು . ರಾತ್ರಿ ಬಂದ ಕಣ್ಣಪ್ಪ, ತನ್ನ ಪ್ರಿಯ ಶಿವನ ಕಣ್ಣುಗಳಿಂದ ರಕ್ತ ಸೋರುವುದನ್ನು ಕಂಡು ವ್ಯಥೆಗೊಳಗಾದ. ತನ್ನ ಬಳಿ ಇದ್ದ ಗಿಡಮೂಲಿಕೆಗಳನ್ನು ಹಚ್ಚಿದನಾದರೂ ರಕ್ತಸ್ರಾವ ನಿಲ್ಲಲಿಲ್ಲ . ತನ್ನ ಪ್ರಭುವಿನ ನೋವು ನೋಡಲಾರದೆ, ಆತ ತನ್ನ ಬಾಣದಿಂದ ತನ್ನ ಒಂದು ಕಣ್ಣನ್ನು ಕಿತ್ತು ಲಿಂಗದ ರಕ್ತಸ್ರಾವವಾಗುತ್ತಿರುವ ಕಣ್ಣಿನ ಮೇಲೆ ಇಟ್ಟ. ರಕ್ತಸ್ರಾವ ನಿಂತಿತು. ಆದರೆ ಸ್ವಲ್ಪ ಸಮಯದಲ್ಲೇ ಲಿಂಗದ ಇನ್ನೊಂದು ಕಣ್ಣೂ ರಕ್ತ ಸುರಿಸಲಾರಂಭಿಸಿತು . ಈಗ ಕಣ್ಣಪ್ಪನ ಸಮಸ್ಯೆ ಎಂದರೆ, ತನ್ನ ಇನ್ನೊಂದು ಕಣ್ಣನ್ನೂ ಕಿತ್ತು ಲಿಂಗದ ಮೇಲಿಟ್ಟರೆ, ತನಗೆ ಕಾಣಿಸುವುದಿಲ್ಲವಲ್ಲ ಎಂಬುದು. ತಕ್ಷಣವೇ ಆತ ತನ್ನ ಕಾಲಿನ ಹೆಬ್ಬೆರಳನ್ನು ರಕ್ತಸ್ರಾವವಾಗುತ್ತಿರುವ ಎರಡನೇ ಕಣ್ಣಿನ ಮೇಲಿಟ್ಟು ಗುರುತು ಮಾಡಿಕೊಂಡು, ತನ್ನ ಉಳಿದ ಕಣ್ಣನ್ನೂ ಕಿತ್ತುಕೊಳ್ಳಲು ಸಿದ್ಧನಾದ .

**ಶಿವನ ಒಲುಮೆ–** ಇಷ್ಟು ದೊಡ್ಡ ತ್ಯಾಗ, ಅಪಾರ ಪ್ರೇಮ ಕಂಡು ಶಿವನು ಪುಳಕಿತನಾದ. ಕೂಡಲೇ ಪ್ರತ್ಯಕ್ಷನಾಗಿ ಕಣ್ಣಪ್ಪನ ಕೈಹಿಡಿದು ತಡೆದನು. ಆತನ ಭಕ್ತಿಗೆ ಮೆಚ್ಚಿ, ಅವನಿಗೆ ಕಣ್ಣುಗಳನ್ನು ಮರಳಿ ನೀಡಿ, ಮುಕ್ತಿಯನ್ನು ಅನುಗ್ರಹಿಸಿದನು . ಕಣ್ಣಪ್ಪನನ್ನು ತಮ್ಮ ಪರಮ ಭಕ್ತರಲ್ಲಿ ಒಬ್ಬರಾಗಿ ಸ್ವೀಕರಿಸಿದನು . ಅಂದಿನಿಂದ ಈತನು ನಾಯನ್ಮಾರ್ (ಶೈವ ಸಂತರು) ಪಟ್ಟವನ್ನು ಪಡೆದು ಪೂಜಿಸಲ್ಪಡುತ್ತಾನೆ .

**ಈ ಘಟನೆಯೇ ಭಕ್ತಿ**–ವಿಶ್ವಾಸಗಳ ಸಂಕೇತವಾಗಿ ಮಹಾಶಿವರಾತ್ರಿಯಂದು ಸ್ಮರಿಸಲ್ಪಡುತ್ತದೆ. ಈ ಕಥೆಯು ದಕ್ಷಿಣ ಭಾರತದಲ್ಲಿ, ವಿಶೇಷವಾಗಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಬಹು ಜನಪ್ರಿಯವಾಗಿದೆ. ಬೇಡರ ಕಣ್ಣಪ್ಪನ ಕಥೆ ನಮಗೆ ಕಲಿಸುವ ಸಂದೇಶವೆಂದರೆ, ದೇವರನ್ನು ಮುಟ್ಟಲು ವಿದ್ಯೆ, ಆಚಾರಗಳಿಗಿಂತ ಪ್ರಾಮಾಣಿಕ ಭಾವ ಮತ್ತು ನಿಷ್ಕಲ್ಮಶ ಪ್ರೇಮವೇ ಮುಖ್ಯ. ದೇವರು ಭಾವಪ್ರಿಯನೇ ಹೊರತು ಬಾಹ್ಯಪ್ರಿಯನಲ್ಲ ಎಂಬುದಕ್ಕೆ ಬೇಡರ ಕಣ್ಣಪ್ಪನೇ ಸಾಕ್ಷಿಯಾಗಿದ್ದಾನೆ .



**–ಆಂಜನೇಯ ನಸಲಾಪುರ**
**ಉಪನ್ಯಾಸಕರು**

# ಪ್ರಭುಲಿಂಗ ಲೀಲೆ ಪ್ರವಚನ ಸಮಾರೋಪ ಸಮಾರಂಭ



ಧೈರ್ಯದ ದಾರಿ

ಸಿಂಧನೂರಿನ ಕಾರುಣ್ಯಾಶ್ರಮದ ಸೇವೆಗೆ ಒಲಿದ ರಾಜ್ಯ ಮಟ್ಟದ ಸದ್ಗುರು ಶ್ರೀ ವಿರೂಪಾಕ್ಷೇರ ಕೃಪಾಭೂಷಣ ಪ್ರಶಸ್ತಿ

ಮಾನ್ವಿ: ಪಟ್ಟಣದ ಧ್ಯಾನ ಮಂದಿರದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಗಾರಿಗೆ ಜಾತ್ರೆ ಕಾರ್ಯಕ್ರಮ ಅಂಗವಾಗಿ ಶನಿವಾರ ಸಂಜೆ ನಡೆದ ಪ್ರಭುಲಿಂಗ ಲೀಲೆ ಪ್ರವಚನ ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಮಿಗಳು ಆರ್ಶೀವಾಚನ ನೀಡಿ ನಮ್ಮ ಮನಸ್ಸು, ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದಕ್ಕೆ ಧಾರ್ಮಿಕ ಪ್ರವಚನಗಳು ಅನುಕೂಲವಾಗುತ್ತದೆ. ಜಾತಿ,ವರ್ಗ,ವರ್ಣ,ದ್ವೇಷ,ಅಸೂಯ್ಯ ರಹಿತವಾಗಿ ಸಮಾಜವನ್ನು ಕಟ್ಟುವುದಕ್ಕಾಗಿ ಕಲ್ಮಠ ವತಿಯಿಂದ ಗಾರಿಗೆ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ದೇವರು ನೀಡಿದ ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳುವುದು ಕೂಡ ನಮ್ಮ ಕೈಯಲ್ಲಿರುತ್ತದೆ ಎಂದು ತಿಳಿಸಿದರು.

ಬಳ್ಳಾರಿಯ ಚಿಂತಕರಾದ ಅನುರಾಧಾ ರವರಿಂದ ಉಪನ್ಯಾಸ ನೀಡಿ ನಮ್ಮ ಪ್ರಾಚೀನ ಸನಾತನ ಧರ್ಮದ ಪ್ರತಿಯೊಂದು ಆಚರಣೆಗಳಲ್ಲಿಯು ಕೂಡ ವೈಜ್ಞಾನಿಕ ಕಾರಣಗಳಿವೆ ಉತ್ತಮ ನಡತೆ ,ಇತರರನ್ನುಗೌರವಿಸುವುದು ಇತರರನ್ನು ಒಟ್ಟೂಗೂಡಿಸಿಕೊಂಡು ಹೋಗುವುದು ನಮ್ಮ ಭಾರತೀಯ ಸಂಸ್ಕೃತಿಯಾಗಿದೆ ಎಂದು ತಿಳಿಸಿದರು.

ಕಲ್ಮಠದ ವತಿಯಿಂದ 2025– 26 ನೇ ಸಾಲಿನ ರಾಜ್ಯ ಮಟ್ಟದ ಸದ್ಗುರು ಶ್ರೀ ವಿರೂಪಾಕ್ಷೇರ ಕೃಪಾಭೂಷಣ ಪ್ರಶಸ್ತಿಯನ್ನು ಸಿಂಧನೂರಿನ ಕಾರುಣ್ಯಾಶ್ರಮದ ಕಾರ್ಯಧ್ಯಕ್ಷರಾದ ಚನ್ನಬಸವಸ್ವಾಮಿ ಹಿರೇಮಠ ಹರೆಟನೂರು ಸುಜಾತ ಹಿರೇಮಠ ದಂಪತಿಗಳಿಗೆ ಕಾರುಣ್ಯಶ್ರಮವನ್ನು ಕಟ್ಟಿ ಅಂಧ,ಅನಾಥ,ಹಿರಿಯ ನಾಗರಿಕರಿಗೆ,ಬುದ್ದಿಮಾಂದ್ಯತೆಯುಳ್ಳವರು ಸೇರಿದಂತೆ 54 ಜನರಿಗೆ ಆಶ್ರಯ ನೀಡಿ ಪೋಷಿಸುತ್ತಿರುವುದಕ್ಕಾಗಿ ಪ್ರಶಸ್ತಿ ಪತ್ರ, 25 ಸಾವಿರ ನಗದು ಪುರಸ್ಕಾರ ದೊಂದಿಗೆ ಸನ್ಮಾನಿಸಿ ಗೌರವಿಸಲಾಯಿತು.

ಮಾನ್ವಿ ಪಟ್ಟಣದ ಸ್ಟೆಪಿಂಗ್ ಸ್ಟೋನ್ ಸ್ಕೂಲ್ ವಿದ್ಯಾರ್ಥಿಗಳಿಂದ ಸಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ನೀಲಗಲ್ ಬೃಹನ್ಮಠದ ಅಭಿನವ ಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು , ರಾಯಚೂರು ಮಂಗಳವಾರ ಪೇಟೆಯ ಹಿರೇಮಠದ ವೀರಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ಪ್ರವಚನ ಕಾರರಾದ ರುದ್ರಯ್ಯಸ್ವಾಮಿ ಮದ್ಲಾಪುರ್, ಸಾಮಾಜಿಕ ಹೋರಾಟಗಾರರಾದ ಪ್ರಭುರಾಜ್ ಕೊಡ್ಲಿ ಸೇರಿದಂತೆ ಇನ್ನಿತರರು ಇದ್ದರು.

# ಕುಟುಂಬದ ಬಾಂಧವ್ಯ ಗಟ್ಟಿಯಾಗಲು ದಿನದ ಒಂದು ಊಟ ಎಲ್ಲಾರು ಒಟ್ಟಾಗಿ ಮಾಡಿ



ಕುಟುಂಬದ ಸರ್ವ ಸದಸ್ಯರು ಸಾಮೂಹಿಕ ಹೊಣೆಗಾರಿಕೆಯಿಂದ ಪರಸ್ಪರರ ತಪ್ಪುಗಳನ್ನ ಸರಿಪಡಿಸಿಕೊಳ್ಳಬೇಕಾದರೆ. ಅವರ ದುಶ್ಚಟಗಳು ತೀರ ಕೌನ್ಸೆಲಿಂಗ್ ಹಂತಕ್ಕೆ ಹೋಗದಂತೆ ವ್ಯಸನಗಳನ್ನು ಆರಂಭಿಕ ಹಂತದಲ್ಲಿ ಚಿವುಟಿ ಹಾಕಬೇಕು. *"ಕುಟುಂಬ"* ಒಂದು ಸುಂದರವಾದ ಸಾಮಾಜಿಕ ಮತ್ತು ಭಾವನಾತ್ಮಕ ವ್ಯವಸ್ಥೆ.

ಇವತ್ತಿನ ದಿನಗಳಲ್ಲಿ ಒಂದೇ ಮನೆಯ ಸದಸ್ಯರು ಸಮಯದ ಅಭಾವದಿಂದ ಮುಖಾಮುಖಿ ಮಾತನಾಡದಷ್ಟು ದೂರವಾಗುತ್ತಿದ್ದಾರೆ. ಆದರೂ ಮನೆಯ ಎಲ್ಲ ಸದಸ್ಯರು ರಾತ್ರಿ ಊಟವನ್ನು ಒಂದೇ ಡೈನಿಂಗ್ ಟೇಬಲ್ ಮೇಲೆ ಒಂದೇ ಸಮಯದಲ್ಲಿ ಮಾಡುವ ಸಣ್ಣ ಪ್ರಯತ್ನ ಮಾಡಿ. ಒಬ್ಬರು ಲೇಟ್ ಮಾಡಿದರೆ ಎಲ್ಲರೂ ಕಾಯುವ ಹಾಗೆ ಇರಿ. ಹಾಗೆ ಆದಾಗ ಎಲ್ಲರೂ ಆದಷ್ಟು ಒಂದೇ ಸಮಯಕ್ಕೆ ಸೇರಿ ತಮ್ಮ ತಮ್ಮ ಕಷ್ಟ ಸುಖ ಮಾತನಾಡುತ್ತಾ ಊಟ ಸವಿದರೆ ಅನೇಕ ಸಮಸ್ಯೆ ತಾವಾಗಿಯೇ ಬಗೆಹರಿಯುತ್ತವೆ. ಮೇಲಾಗಿ ಸಂಬಂಧಗಳು ಸುಧಾರಿಸುತ್ತವೆ. ಒಮ್ಮೆ ಟ್ರೈ ಮಾಡಿ!!. Its a sweet experience!!.

ಹಾಗಾಗಿ ಮನೆಯ ಸದಸ್ಯರ ಯಾವುದೇ ವ್ಯಸನಗಳನ್ನು, ಅನಾರೋಗ್ಯವನ್ನು, ಸಾಲ–ಸೋಲಗಳನ್ನು, ಅವಮಾನಗಳನ್ನು ಮುಚ್ಚಿಡದೆ ಮುಕ್ತವಾಗಿ ಚರ್ಚಿಸಿ, ಭಾದಿತರಾದವನ್ನು ಸಮಸ್ಯೆಯಿಂದ ಹೊರತರುವ ಕೆಲಸವಾಗಬೇಕಿದೆ. ಸುಖ ಸಂತೋಷಗಳನ್ನು ಹಂಚಿಕೊಳ್ಳುವುದಕ್ಕಿಂತ ನೋವು ಮತ್ತು ಸಮಸ್ಯೆಗಳನ್ನು ಅತೀ ಬೇಗ ಹಂಚಿಕೊಳ್ಳಿ. ಇದರಿಂದ ಸಮಸ್ಯೆ ಬೇಗ ಪರಿಹಾರವಾಗಬಲ್ಲದು.

ಅತಿಯಾಗಿ ಮಕ್ಕಳನ್ನು ಮುದ್ದಿಸುತ್ತ ಹೋದಂತೆ ಮುಂದೊಂದು ದಿನ ಅವರೇ ನಮಗೆ ಗುದ್ದನ್ನು ಕೊಡಬಹುದು!!! ನಮ್ಮ ಮನೆಯ ದೀಪವೆಂದು ಮುತ್ತಿಟ್ಟರೆ, ಸುಡದೇ ಬಿಟ್ಟಿತೇ? ಹುಷಾರ್!! ಪರಿಹಾರಕಿಂತ ಮುನ್ನೆಚ್ಚರಿಕೆ ಮುಖ್ಯವಲ್ಲವೇ??



**–ಮಹಿಬೂಬ್ ಮದ್ಲಾಪುರ**
**ಸಂಪನ್ಮೂಲ ವ್ಯಕ್ತಿಗಳು ಮಾನವಿ**

**ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ**
**6360866626**

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**